# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 43 | ಅಕ್ಟೋಬರ್ 25, 1987 | ಬೆಲೆ 1 ರೂ.


ಒಳಗಿನ ಪುಟಗಳಲ್ಲಿ



# ಶ್ರೀಲಂಕಾ: ಒಪ್ಪಂದವನ್ನು ಪೂರ್ಣವಾಗಿ ಪಾಲಿಸಿ – ಪಾಲಿಟ್‌ಬ್ಯೂರೋ ಕರೆ

ಶ್ರೀಲಂಕಾದ ಚೌಕಟ್ಟಿನೊಳಗೆ ಜನಾಂಗ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಆಧಾರವಾಗಬಹುದಿದ್ದ ಭಾರತ-ಶ್ರೀಲಂಕಾ ಒಪ್ಪಂದ ಒಂದಾದ ಮೇಲೊಂದರಂತೆ ನಡೆದ ಹತ್ಯೆಗಳು ಮತ್ತು ಅದಕ್ಕೆ ಪ್ರತಿಯಾಗಿ ನಡೆದ ಹಿಂಸಾಚಾರಗಳಿಂದಾಗಿ ಅಪಾಯಕ್ಕೀಡಾಗಿದೆಯೆಂದು ಸಿ.ಪಿ.ಐ. (ಎಂ)ನ ಪಾಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ.

ಸಿಂಹಳೀ ಮತ್ತು ತಮಿಳರು-ಈ ಎರಡೂ ಕಡೆಗಳ ಪ್ರತಿಗಾಮಿಗಳು ಒಪ್ಪಂದದ ಅನುಷ್ಠಾನವನ್ನು ಬುಡಮೇಲು ಮಾಡಲು ಕೆಲಸ ಮಾಡುತ್ತಿದ್ದಾರೆಂಬುದು ಸ್ಪಷ್ಟ. ಎಲ್.ಟಿ.ಟಿ.ಇ. ಆರಂಭಿಸಿದ ಸಾಮೂಹಿಕ ಹತ್ಯೆಗಳು ಭಾರತದ ಶಾಂತಿಪಾಲನಾ ಪಡೆಗಳಿಗೆ ಮಾತ್ರವೇ ಅಲ್ಲ, ಶ್ರೀಲಂಕಾದ ಜನಾಂಗ ತಿಕ್ಕಾಟಕ್ಕೆ ಒಂದು ಶಾಶ್ವತ ಪರಿಹಾರ ಬಯಸುತ್ತಿರುವ ಎಲ್ಲರಿಗೂ ಒಂದು ಗಂಭೀರ ಸಮಸ್ಯೆಯುಂಟು ಮಾಡಿವೆ. ಶ್ರೀಲಂಕಾ ಸರ್ಕಾರ ಕೂಡಾ ತಮಿಳು ತೀವ್ರಗಾಮಿಗಳ ಬಗ್ಗೆ ತಳೆದ ಹಠಮಾರೀ ನಿಲುವಿನಿಂದಾಗಿ ಪರಿಸ್ಥಿತಿ ಹದಗೆಡುವಲ್ಲಿ ತನ್ನ ಕಾಣಿಕೆಯನ್ನೂ ನೀಡಿದೆ. ಈಗ ಒಪ್ಪಂದಕ್ಕೆ ಉತ್ತರ ಹಾಗೂ ಪೂರ್ವ ಶ್ರೀಲಂಕಾದ ತಮಿಳು ಜನತೆಯ ಬೆಂಬಲ ಪಡೆಯಲು ಸರ್ವ ಪ್ರಯತ್ನ ನಡೆಸುವುದು ಹಾಗೂ ಒಪ್ಪಂದದ ಎಲ್ಲಾ ಅಂಶಗಳನ್ನು ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುವುದು ಅತೀ ಅಗತ್ಯ; ಹೀಗಾದಾಗ ಮಾತ್ರವೇ ಸಾಮ್ರಾಜ್ಯಶಾಹೀ ಏಜೆಂನ್ಸಿಗಳು ಒಪ್ಪಂದವನ್ನು ನಾಶಗೊಳಿಸುವ ತಮ್ಮ ಪ್ರಯತ್ನಗಳಲ್ಲಿ ಯಶಸ್ಸು ಪಡೆಯದಂತೆ ಮಾಡುವುದು ಸಾಧ್ಯ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ನವದೆಹಲಿಯಲ್ಲಿ ಅಕ್ಟೋಬರ್ 10 ಹಾಗೂ 11ರಂದು ನಡೆದ ಪಾಲಿಟ್ ಬ್ಯೂರೋ ಸಭೆಯ ನಂತರ ಹೊರಡಿಸಿದ ಪತ್ರಿಕಾ ಪ್ರಕಟಣೆಯಲ್ಲಿ ಇದನ್ನು ಹೇಳಲಾಗಿದೆ.

## ರಾಜೀವ್ ರಾಜೀನಾಮೆಗಾಗಿ ಪ್ರಕ್ಷೋಭೆ

ಎಡ ಪಕ್ಷಗಳು ಇತರ ಜಾತ್ಯಾತೀತ ವಿರೋಧ ಪಕ್ಷಗಳ ಸಹಕಾರದೊಂದಿಗೆ ಆರಂಭಿಸಿರುವ ಕೋಮುವಾದ ಮತ್ತು ಪ್ರತ್ಯೇಕತಾವಾದದ ವಿರುದ್ಧ ಪ್ರಚಾರದಲ್ಲಿ ಹಾಗೂ ಎಡ ಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳು ಜನತೆಯ ಬೇಡಿಕೆಗಳಿಗಾಗಿ ಆರಂಭಿಸಿರುವ ಪ್ರಚಾರ-ಪ್ರಕ್ಷೋಭೆಗಳನ್ನು ಭಾರೀ ಪ್ರಮಾಣದಲ್ಲಿ ಯಶಸ್ವೀಗೊಳಿಸಲು ಪಕ್ಷದ ಸದಸ್ಯರು ಹಾಗೂ ಮಿತ್ರರಿಗೆ ಪಾಲಿಟ್‌ಬ್ಯೂರೋ ಹೇಳಿಕೆಯಲ್ಲಿ ಕರೆ ನೀಡಲಾಗಿದೆ.

ರಾಜಸ್ಥಾನದ ದೇವರಾಲಾದಲ್ಲಿ ಸತಿಯ ಹೆಸರಿನಲ್ಲಿ ನಡೆದ ಕೊಲೆಯ ಸಂದರ್ಭದಲ್ಲಿ ಮತಾಂಧ ಶಕ್ತಿಗಳಿಗೆ, ಆಳುವ ಹಾಗೂ ಕೆಲವು ವಿರೋಧ ಪಕ್ಷಗಳ ಮುಖಂಡರೂ ಕೂಡಾ, ಬಹಿರಂಗ ಬೆಂಬಲ ನೀಡಿರುವುದು ದೇಶದಲ್ಲಿ ಬಹುಸಂಖ್ಯಾತರ ಮೂಲಭೂತವಾದ ಮತ್ತು ಪುನರುತ್ಥಾನವಾದ ತಲೆಯೆತ್ತುವ ಧೈರ್ಯ ಮಾಡುತ್ತಿರುವುದಕ್ಕೆ ಒಂದು ಉದಾಹರಣೆ. ಇದರ ಜತೆಗೆ ಅಲ್ಪ ಸಂಖ್ಯಾತ ಮೂಲಭೂತವಾದ ಮತ್ತು ಪುನರುತ್ಥಾನವಾದಕ್ಕೂ ಆಳುವ ಪಕ್ಷ ಹಾಗೂ ವಿರೋಧಿ ಬೂರ್ಜ್ವಾ ಪಕ್ಷಗಳ ಮುಖಂಡತ್ವದ ಕೆಲವು ವಿಭಾಗಗಳು ಪ್ರೋತ್ಸಾಹ ನೀಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪಕ್ಷಗಳ ಜಾತ್ಯಾತೀತವಾದಿಗಳನ್ನು ಅಣಿನೆರಿಸುವುದು ಅತ್ಯಗತ್ಯ.

ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆ ಕಾಂಗ್ರೆಸ್ ಸರ್ಕಾರದ ವರ್ಗ ಧೋರಣೆಗಳ ಸ್ವಾಭಾವಿಕ ದುಷ್ಫಲ. ಇದು ರೇಶನ್ ಮೂಲಕ ವಿತರಿಸುವ ಅಕ್ಕಿಯ ಬೆಲೆಯನ್ನು ಏರಿಸುವುದು ಮುಂತಾದ ಕ್ರಮಗಳಿಂದಾಗಿ ಇನ್ನಷ್ಟು ಉಲ್ಬಣಗೊಂಡಿದೆ. ಎಡ ನೇತೃತ್ವದ ಸಂಘಟನೆಗಳು ಈ ಪ್ರಶ್ನೆ ಹಾಗೂ ಜನತೆಯ ಇತರ ದಿನನಿತ್ಯದ ಸಂಕಷ್ಟಗಳ ಬಗ್ಗೆ ಅವರ ಹಕ್ಕುಗಳ ರಕ್ಷಣೆಗಾಗಿ ಹಿಂದಿನಿಂದಲೂ ಹೋರಾಟಗಳನ್ನು ನಡೆಸುತ್ತಾ ಬಂದಿವೆ. ಈಗ ನಡೆಯುತ್ತಿರುವುದು ಈ ಹೋರಾಟಗಳಿಗೆ ಅಖಿಲ ಭಾರತ ಸ್ವರೂಪ ನೀಡುವ ಯತ್ನ.

ಈ ಎರಡೂ ಪ್ರಚಾರ ಪ್ರಕ್ಷೋಭೆಗಳು ರಾಜೀವಗಾಂಧಿ ಸರ್ಕಾರದ ರಾಜೀನಾಮೆಗಾಗಿ ಹಾಗೂ ನಂತರ ಮಧ್ಯಾವಧಿ ಚುನಾವಣೆಗಾಗಿ ರಾಷ್ಟ್ರೀಯ ರಾಜಕೀಯ ಪ್ರಚಾರದಒಂದು ಪ್ರಮುಖ ಕೊಂಡಿ ಎಂದು ಪಾಲಿಟ್‌ಬ್ಯೂರೋ ಹೇಳಿದೆ. ಕೇಂದ್ರ ಸಮಿತಿ ಈ ಬಗ್ಗೆ ನೀಡಿದ ಕರೆಗೆ ಜನತೆಯಿಂದ ವ್ಯಾಪಕ ಪ್ರತಿಕ್ರಿಯೆ ದೊರೆತಿದ್ದು ಇನ್ನೂ ಹೆಚ್ಚೆಚ್ಚು ಜನ ವಿಭಾಗಗಳನ್ನು ಈ ಹೋರಾಟದಲ್ಲಿ ಒಳಗೊಳ್ಳುವಂತೆ ಇದನ್ನು ಮುಂದುವರಿಸ ಬೇಕೆಂದು ಪಾಲಿಟ್‌ಬ್ಯೂರೋ ಒತ್ತಿ ಹೇಳಿದೆ.

## ಎರಡು ಮಾರ್ಗಗಳು

ವಿರೋಧಿ ಶಕ್ತಿಗಳ ಐಕ್ಯತೆಗಾಗಿ ಎರಡು ಮಾರ್ಗಗಳನ್ನು ಪ್ರತಿಪಾದಿಸಲಾಗುತ್ತಿದೆ. ಮೊದಲನೆಯದು ಎಡ ಮತ್ತು ಜಾತ್ಯಾತೀತ ಪಕ್ಷಗಳ ಐಕ್ಯತೆಗಾಗಿ ಎಡ ಪಕ್ಷಗಳು ನಡೆಸುತ್ತಿರುವ ಹೋರಾಟ. ಎರಡನೆಯದು ಬಿ.ಜೆ.ಪಿ ಹಾಗೂ ಇತರ ಬೂರ್ಜ್ವಾ ವಿರೋಧ ಪಕ್ಷಗಳ ಕೆಲವುಮುಖಂಡರು ಪ್ರಯತ್ನಿಸುತ್ತಿರುವ ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳ ಪ್ರಾಬಲ್ಯ ಹೊಂದಿರುವ ಐಕ್ಯತೆ. ಇದರಲ್ಲಿ ಮೊದಲನೆಯ ಮಾರ್ಗ ಸಾಕಷ್ಟು ಯಶಸ್ಸುಗಳಿಸಿದೆ. ಆದರೆ ಈ ಹೋರಾಟ ಇನ್ನೂ

(8ನೇ ಪುಟ ನೋಡಿ)

# ಎತ್ತರಕ್ಕೆ, ಮತ್ತಷ್ಟು ಉನ್ನತ ಮಟ್ಟಕ್ಕೆ ಏರುತ್ತಿರುವ ಸಮಾಜವಾದಿ ಬೆಳವಣಿಗೆ

ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿಯು ಅಕ್ಟೋಬರ್ ಕ್ರಾಂತಿಯ 70 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸೋವಿಯತ್ ಯೂನಿಯನ್‌ನ ಕಮ್ಯುನಿಸ್ಟ್ ಪಕ್ಷಕ್ಕೂ, ಸೋವಿಯತ್ ಯೂನಿಯನ್‌ನ ಕಾರ್ಮಿಕ ವರ್ಗಕ್ಕೂ ಮತ್ತು ಜನತೆಗೂ ತನ್ನ ಕ್ರಾಂತಿಕಾರೀ ಶುಭಾಶಯಗಳನ್ನು ಸಲ್ಲಿಸುತ್ತದೆ.

ಸೋವಿಯತ್ ಜನತೆಯ ಮತ್ತು ಕಾರ್ಮಿಕ ವರ್ಗದ ಈ ಐತಿಹಾಸಿಕ ಸಾಧನೆಯು ಏಳು ದಶಕಗಳು ಅಗಾಧ ಬೆಳವಣಿಗೆಗಳ ಮತ್ತು ಜಾಗತಿಕ ಪರಿಸ್ಥಿತಿಯಲ್ಲಿ ಪರಿವರ್ತನಶೀಲ ಬದಲಾವಣೆಗಳ ಮತ್ತು ವರ್ಗಶಕ್ತಿಗಳ ಹೊಂದಾಣಿಯ ಅವಧಿಯಾಗಿದೆ.

ಈ ಶಕ್ತಿಶಾಲೀ ಪರಿವರ್ತನೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೋವಿಯತ್ ಜನತೆಯ ಸಮಾಜವಾದೀ ಸಾಧನೆಗಳೊಂದಿಗೆ ಸಂಬಂಧ ಪಡೆದಿವೆ. ಸೋವಿಯತ್ ಜನತೆಯ ಜಾಗತಿಕ ಕ್ರಾಂತಿಕಾರೀ ಪ್ರಕ್ರಿಯೆಯ ಕುರಿತಾದ ಕಾಳಜಿ, ಗುಲಾಮ ದೇಶಗಳ ವಿಮುಕ್ತಿಯ ಕುರಿತಾದ ಅವರ ಕಳಕಳಿ ಪ್ರಜಾಪ್ರಭುತ್ವ, ಶಾಂತಿ ಮತ್ತು ಸಮಾಜವಾದದ ಶತ್ರುಗಳ ವಿರುದ್ಧವಾಗಿ ಅವರು ತೋರಿರುವ ಧೈರ್ಯ ಮತ್ತು ಯುದ್ಧ ನೈಪುಣ್ಯಗಳಿಗೂ ಜಾಗತಿಕ ರಂಗದಲ್ಲಿನ ಪರಿವರ್ತನೆಗಳಿಗೂ ಸಂಬಂಧವಿದೆ. ಈ ಮಹಾನ್ ಪಾತ್ರ ನಿರ್ವಹಣೆಯ ಹಿನ್ನೆಲೆಯಲ್ಲಿ ಶ್ರಮಜೀವಿ ವರ್ಗದ ಸರ್ವಾಧಿಕಾರದ, ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಪಕ್ಷದ ನಾಯಕತ್ವವಿದೆ. ಇದಿಲ್ಲದಿದ್ದ ಪಕ್ಷದಲ್ಲಿ ಜಗತ್ತನ್ನೇ ಅಲುಗಾಡಿಸುವ ಸಾಧನೆಗಳನ್ನು ಇಷ್ಟೊಂದು ಅಲ್ಪ ಕಾಲಾವಧಿಯಲ್ಲಿ ಮಾಡಲಾಗುತ್ತಿರಲಿಲ್ಲ.

ಅಕ್ಟೋಬರ್ ಕ್ರಾಂತಿಯ ನಂತರ ಜಗತ್ತಿನಾದ್ಯಂತ ನಡೆದಿರುವ ಕ್ರಾಂತಿಗಳಲ್ಲಿ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಹಾಗೂ ಸಮಾಜವದಕ್ಕಾಗಿ ಹೋರಾಡುತ್ತಿರುವ ಜನತೆಯಲ್ಲಿ ಅಕ್ಟೋಬರ್ ಕ್ರಾಂತಿ ಸ್ಫೂರ್ತಿ ತುಂಬಿವೆ.

ಫ್ಯಾಸಿಸ್ಟ ವಿರೋಧಿ ಯುದ್ಧದಲ್ಲಿ ಸೋವಿಯತ್ ಯೂನಿಯನ್ ಗಳಿಸಿದ ವಿಜಯವು ಜಗತ್ತಿನ ಇತಿಹಾಸದಲ್ಲಿ ಅಕ್ಟೋಬರ್ ಕ್ರಾಂತಿಯ ನಂತರದ ಒಂದು ಮಹಾನ್ ಘಟನೆಯಾಗಿದೆ.

ಈ ಘಟನೆಯು ಜಾಗತಿಕ ವರ್ಗ ಶಕ್ತಿಗಳ ಸಮತೋಲನವನ್ನು ಬದಲಾಯಿಸುವ ಧೀರ್ಘ ಪ್ರಕ್ರಿಯೆಯನ್ನು ಆರಂಭಿಸಿದೆ. ಸರ್ವ ಯೂರೋಪಿನ ಸಮಾಜವಾದೀ ಕ್ರಾಂತಿಗಳ ವಿಜಯಕ್ಕೆ ಕಾರಣವಾಗಿವೆ, ಚೀನಾದ ಕ್ರಾಂತಿಯ ವಿಜಯಕ್ಕೂ ಇದು ಚೈತನ್ಯ ನೀಡಿದೆ. ವಸಾಹತು ಪದ್ಧತಿಗೆ ಬಲವಾದ ಹೊಡೆತ ಕೊಟ್ಟು ಭಾರತ ಮತ್ತಿತರ ದೇಶಗಳು ಸ್ವಾತಂತ್ರ್ಯ ಗಳಿಸಲು ಉತ್ತೇಜನ ನೀಡಿದೆ. ಕೊರಿಯಾ ಮತ್ತು ವಿಯೆಟ್ನಾಂಗಳ ಕ್ರಾಂತಿ ಜಯಗಳಿಸಲು ದಾರಿ ಮಾಡಿಕೊಟ್ಟು ಅಂತಿಮವಾಗಿ ವಿಯೆಟ್ನಾಂನಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹೀ ಪಡೆಗಳು ಸೋಲುವಂತೆ ಮಾಡಿದೆ. ಕ್ಯೂಬಾದ ಕ್ರಾಂತಿಗೆ ಮತ್ತಿತರ ದೇಶಗಳು ಪ್ರಜಾಪ್ರಭುತ್ವ

(8ನೇ ಪುಟ ನೋಡಿ)

### "1–7ರವರೆಗೆ ಅಕ್ಟೋಬರ್ ಕ್ರಾಂತಿಯ ಸಪ್ತಾಹ"

ನವೆಂಬರ್ 1 ರಿಂದ 7ರ ವರೆಗೆ ಅಕ್ಟೋಬರ್ ಮಹಾಕ್ರಾಂತಿಯ 70 ನೇ ವಾರ್ಷಿಕೋತ್ಸವವನ್ನು ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಸಂಘಟಿಸ ಬೇಕೆಂದು ಸಿ. ಪಿ. ಐ.(ಎಂ) ನ ಪಾಲಿಟ್ ಬ್ಯೂರೋ ಎಲ್ಲಾ ಪಾರ್ಟಿ ಸಮಿತಿಗಳಿಗೆ ಮನವಿ ಮಾಡಿದೆ.

### ಭೂಸುಧಾರಣೆ, ಕಾರ್ಮಿಕ ಹಕ್ಕುಗಳು ಮತ್ತು ಸ್ವಾವಲಂಬನೆ

# ಕೇಂದ್ರ ಸಮಿತಿ ದೇಶದ ಮುಂದಿಟ್ಟ ಹದಿನೇಳು ಬೇಡಿಕೆಗಳು

ಎ. ಎಸ್. ಆಚಾರ್ಯ

**ಆಗಸ್ಟ್ ಎರಡನೇ ವಾರದಲ್ಲಿ ಸಭೆ ಸೇರಿದ್ದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ರಾಜೀವಗಾಂಧಿ ಸರಕಾರದ ರಾಜೀನಾಮೆ ಮತ್ತು ಮಧ್ಯಾವಧಿ ಚುನಾವಣೆಗಾಗಿ ಒತ್ತಾಯಿಸಲು ಆಧಾರವಾಗಿಟ್ಟುಕೊಂಡ ಹದಿನೇಳು ಅಂಶಗಳ ಪರ್ಯಾಯ ಕಾರ್ಯಕ್ರಮದ ಹತ್ತು ಬೇಡಿಕೆಗಳನ್ನು ಕಳೆದ ಸಂಚಿಕೆಯಲ್ಲಿ ವಿವರಿಸಲಾಗಿದೆ. ಉಳಿದ ಬೇಡಿಕೆಗಳು ಇಂತಿವೆ.**

## ಭೂಸುಧಾರಣೆಯಲ್ಲಿ ತಿದ್ದುಪಡಿ ತ್ವರಿತ ಅನುಷ್ಠಾನ

ಹಲವಾರು ಭೂಸುಧಾರಣೆಗಳ ನಂತರವೂ ಕೃಷಿಯೋಗ್ಯ ಭೂಮಿಯ ಒಡೆತನ ಕೆಲವೇ ದೊಡ್ಡ ಭೂಮಾಲಕರ ಕೈಯಲ್ಲಿ ಕೇಂದ್ರೀಕೃತವಾಗಿರುವುದನ್ನು ಕಾಣಬಹುದು. ಇಪ್ಪತ್ತೈದು ಎಕ್ರೆಗಿಂತಲೂ ಹೆಚ್ಚು ಭೂಮಿಯನ್ನು ಹೊಂದಿರುವ ಹಿಡುವಳಿದಾರರ ಪ್ರಮಾಣ ಕೇವಲ 2.4%ರಷ್ಟು. ಇಷ್ಟು ಚಿಕ್ಕ ಪ್ರಮಾಣದ ದೊಡ್ಡ ಹಿಡುವಳಿದಾರರ ಕೈಯಲ್ಲಿ ಶೇ 22 8ರಷ್ಟು ಭೂಮಿಯ ಒಡೆತನವಿದೆ. ಹತ್ತು ಎಕ್ರೆಗಿಂತಲೂ ಹೆಚ್ಚು ಭೂಮಿಯ ಒಡೆತನ ಹೊಂದಿರುವ ಶೇಕಡಾ 11.5 ರಷ್ಟಿರುವ ಹಿಡುವಳಿದಾರರ ಕೈಯಲ್ಲಿ ಶೇ.52.5 ರಷ್ಟು ಕೃಷಿಯೋಗ್ಯ ಭೂಮಿ ಇದೆ. ಅಂದರೆ ಕೇವಲ ಹತ್ತನೇ ಒಂದರಷ್ಟಿರುವ ಭೂಹಿಡುವಳಿದಾರರು ಒಟ್ಟು ಭೂಮಿಯ ಅರ್ಧಾಂಶಕ್ಕಿಂತಲೂ ಹೆಚ್ಚನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ ಕೇಂದ್ರ ಸರಕಾರದ ಶ್ರೀಮಂತ ರೈತರು ಮತ್ತು ಭೂಮಾಲಿಕ–ಬಂಡವಾಳಗಾರರ ಪರವಾದ ನೀತಿಯಿಂದಾಗಿ ಸಣ್ಣ ಹಿಡುವಳಿದಾರರು ತಮ್ಮ ಭೂಮಿಯನ್ನು ಪರಭಾರೆ ಮಾಡಿ ಇನ್ನಷ್ಟು ಸಣ್ಣ ಹಿಡುವಳಿದಾರರಾಗುತ್ತಿದ್ದಾರೆ ಅಥವಾ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಎರಡೂವರೆ ಎಕ್ರೆಗಿಂತಲೂ ಕಡಿಮೆ ಭೂಮಿಯನ್ನು ಹೊಂದಿರುವ ಹಿಡುವಳಿದಾರರ ಪ್ರಮಾಣ 1971 ರಲ್ಲಿ 51 ಶೇಕಡಾ ಇದ್ದದ್ದು 1980-81ಕ್ಕೆ 56.50./. ರಷ್ಟಕ್ಕೆ ಏರಿದೆ. ಹಾಗೆಯೇ ಭೂಹೀನ ಕೃಷಿ ಕಾರ್ಮಿಕರ ಸಂಖ್ಯೆ 1951ರಲ್ಲಿ 3.04 ಕೋಟಿ ಇದ್ದುದು 1981ರಲ್ಲಿ 5.26ಕೋಟಿಗೆ ಏರಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಕೂಡಲೇ ತೀವ್ರವಾದ ಭೂಸುಧಾರಣ ಕಾನೂನನ್ನು ಜ್ಯಾರಿಗೆ ತಂದು ಬಡತನ, ಭೂರಹಿತರ ಸಮಸ್ಯೆ ನಿರುದ್ಯೋಗ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ದೊಡ್ಡ ಭೂಮಾಲಕರ ಕೈಯಲ್ಲಿ ಭೂಮಿಯ ಕೇಂದ್ರೀಕರಣವಾಗಿರುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕು.

## ರೈತರಿಗೆ ಸಾಲ, ಕೃಷಿ ಸಾಮಗ್ರಿಗಳ ಪೂರೈಕೆ

ತಾವು ಬೆಳೆಸಿದ ವಸ್ತುಗಳಿಗೆ ಉತ್ಪಾದಕ ಬೆಲೆಸಿಗದೆ ಮಧ್ಯವರ್ತಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾದ ಸ್ಥಿತಿಯಲ್ಲಿರುವ ರೈತರು ನಷ್ಟ ಅನುಭವಿಸಿದ ಗ್ರಾಮೀಣ ಸಾಲದ ಬಲೆಯಲ್ಲಿ ಸಿಕ್ಕಿ ಬೀಳುತ್ತಾರೆ. ಇದರೊಂದಿಗೆ ಸರಕಾರ ಏರಿಸುತ್ತಿರುವ ನೀರಿನ ತೆರಿಗೆ, ವಿದ್ಯುತ್‌ದರ ಬೆಟರ್‌ಮೆಂಟ್ ಲೆವಿ ಇತ್ಯಾದಿಗಳಿಂದಾಗಿ ಸಣ್ಣ ಮತ್ತು ಮಧ್ಯಮ ರೈತರು ಹತಾಶ ಸ್ಥಿತಿಗೆ ಬಂದಿರುತ್ತಾರೆ. ಕೃಷಿಗೆ ಬೇಕಾದ ರಸಗೊಬ್ಬರ ಮತ್ತು ಉಪಕರಣಗಳನ್ನು ಉತ್ಪಾದಿಸುವ ಬಹುರಾಷ್ಟ್ರೀಯ ಕಂಪೆನಿಗಳಿಗೂಗುತ್ತೇದಾರಿ ಬಂಡವಾಳಗಾರರಿಗೂ ಸಾಕಷ್ಟು ಕುಮಕ್ಕು ನೀಡಬೇಕಾದ ಸರ್ಕಾರ ಕೃಷಿಗೆ ಬೇಕಾದ ಸಾಮಗ್ರಿಗಳ ಬೆಲೆಯೇರಿಕೆಗೂ ಅವಕಾಶ ಮಾಡಿಕೊಟ್ಟಿದೆ. ಗ್ರಾಮಾಂತರ ಪ್ರದೇಶದ ಬಡ ಮತ್ತು ಮಧ್ಯಮ ರೈತರು ಈ ವಿಷವರ್ತುಲದಿಂದ ಪಾರಾಗಿ ಬದುಕಿ ಉಳಿಯಬೇಕಾದರೆ ಅವರಿಗೆ ಸುಲಭ ದರದಲ್ಲಿ ಸೌಲಭ್ಯ ದೊರೆಯುವಂತಾಗಬೇಕು. ರಸಗೊಬ್ಬರ, ಉತ್ತಮ ತಳಿಯ ಬೀಜ ಮತ್ತು ಕೀಟನಾಶಕಗಳಂತಹ ಕೃಷಿಗೆ ಬೇಕಾದ ಸಾಮಗ್ರಿಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಸರ್ಕಾರವು ದೊರಕಿಸಿಕೊಡಬೇಕು.

## ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ

ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ಕಾಲಕಾಲಕ್ಕೆ ಪುನರ್ವಿಮರ್ಶೆ ಮಾಡಿ ನಿಗದಿ ಪಡಿಸಬೇಕು. ಕೃಷಿ ಕಾರ್ಮಿಕರು ಈ ಬೇಡಿಕೆಯನ್ನು ಮುಂದೊಡ್ಡಿ ಹೋರಾಟ ಮಾಡಿದಾಗಲೆಲ್ಲ "ನಿಮಗಾಗಿ ಇಪ್ಪತ್ತಂಶ ಕಾರ್ಯಕ್ರಮವಿದೆ. ನಿಮ್ಮೆಲ್ಲ ಕಷ್ಟಗಳಿಗೆ ಅದೇ ಪರಿಹಾರವೆಂಬ ಧೋರಣೆಯನ್ನು ಕೇಂದ್ರ ಸರ್ಕಾರ ತಳೆಯುತ್ತಿದೆ. ಕೃಷಿಕಾರ್ಮಿಕರು ಮತ್ತು ಗ್ರಾಮಾಂತರ ಕಾರ್ಮಿಕರ ಕನಿಷ್ಟ ವೇತನ ನಿಗದಿ ಮಾಡಲು ನಿರ್ಮಿಸಲಾಗಿದ್ದ 'ಅಸಂಘಟಿತ ಗ್ರಾಮಾಂತರ ಕಾರ್ಮಿಕರ ಸ್ಥಾಯೀ ಸಮಿತಿ'ಯನ್ನು ಇದೇ ನೆಪದಲ್ಲಿ ರಾಜೀವ್ ಸರ್ಕಾರ ಬರಖಾಸ್ತುಗೊಳಿಸಿದೆ. ಗ್ರಾಮಾಂತರ ಕೃಷಿ ಕಾರ್ಮಿಕರು ತಮ್ಮ ರಾಜಕೀಯ ಪ್ರಭಾವದಿಂದ ದೂರವಾಗುತ್ತಿದ್ದಾರೆಂದು ಗೊತ್ತಾದ ಮೇಲಷ್ಟೇ ಕಾಂಗ್ರೆಸ್ ಸರ್ಕಾರ 'ಗ್ರಾಮಾಂತರ ಕಾರ್ಮಿಕರ ರಾಷ್ಟ್ರೀಯ ಕಮಿಶನ್ ಒಂದನ್ನು ನೇಮಿಸಿದೆ. ಇದೂ ಒಂದುಬೂಟಾಟಿಕೆಯ ಕಾರ್ಯಕ್ರಮ. ನ್ಯಾಶನಲ್ ಲೇಬರ್‌ಇನ್ಸ್ಟಿಟ್ಯೂಟ್‌ನ ಡೀನ್ ಆಗಿರುವ ಡಾ. ಪೈ ಅವರು ಅಸಂಘಟಿತ ಕಾರ್ಮಿಕರ ಸಮಸ್ಯೆಯ ಬಗ್ಗೆ ಅಧ್ಯಯನ ನಡೆಸಿ ಕೇಂದ್ರ ಸರಕಾರ ಈಗಾಗಲೇ ಲಭ್ಯವಿರುವ ಮಾಹಿತಿಯ ಆಧಾರದಲ್ಲಿ ಕೃಷಿ ಕಾರ್ಮಿಕರ ಮಸೂದೆಯೊಂದನ್ನು ಜಾರಿಗೊಳಿಸಲು ಸಾಧ್ಯವೆಂದಿದ್ದರು. ಕೃಷಿ ಕಾರ್ಮಿಕರು ಒಕ್ಕೊರಲಿನಿಂದ ಬೇಡುತ್ತಿರುವುದೂ ಇಂತಹ ಕೇಂದ್ರೀಯ ಶಾಸನವನ್ನೇ.

ಕಳೆದ ನಲವತ್ತು ವರ್ಷಗಳಿಂದಲೂ ದೇಶದ ಎಲ್ಲಾ ರಾಜ್ಯಗಳಲ್ಲಿ ಕೃಷಿ ಕಾರ್ಮಿಕರನ್ನು ನಿಕೃಷ್ಟ ರೀತಿಯಿಂದ ನೋಡಿಕೊಳ್ಳಲಾಗಿದೆ. ಬಿಹಾರ್‌ನಂತಹ ರಾಜ್ಯದಲ್ಲಿ ಅವರಿಗೆ ಸಿಗುವುದು ಕೆಲವೊಮ್ಮೆ ದಿನಕ್ಕೆ ಎರಡು ರೂಪಾಯಿ ಮಾತ್ರ. ಕೇರಳ, ಪ. ಬಂಗಾಳದಂತಹ ಕೆಲವೇ ರಾಜ್ಯಗಳನ್ನು ಬಿಟ್ಟರೆ ಉಳಿದೆಡೆ ಈಗಾಗಲೇ ಘೋಷಿಸಿರುವ ಕನಿಷ್ಟ ವೇತನವನ್ನು ಜಾರಿಗೊಳಿಸಲಾಗಿಲ್ಲ. ಅಲ್ಲದೆ 1984ರ ನಂತರ ಈ ಕನಿಷ್ಟ ಕೂಲಿಯನ್ನು ಹೆಚ್ಚಿಸಲಾಗಿಲ್ಲ. ಕೇಂದ್ರ ಸರ್ಕಾರ 1983ರ ಫೆಬ್ರವರಿಯಲ್ಲಿ ಕನಿಷ್ಟ ಕೂಲಿಯನ್ನು ರೂ. 8.50 ರಿಂದ ರೂ. 12.75ರಷ್ಟಕ್ಕೆ ನಿಗದಿಗೊಳಿಸಿತ್ತು. ಮೊನ್ನೆ ಮೇ 20, 1987ರಂದು ಕಾರ್ಮಿಕ ಮಂತ್ರಿಗಳ ಸಭೆಯ ಬಳಿಕ ಕೇಂದ್ರ ಸರ್ಕಾರ ಇದನ್ನು ರೂ. 11ಕ್ಕೆ ಇಳಿಸಿದೆ. ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ವ್ಯಾವಹಾರಿಕ ಮಟ್ಟಕ್ಕೆ ಏರಿಸಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆತರಬೇಕಾದುದು ಇಂದಿನತುರ್ತು ಅವಶ್ಯಕತೆ. ಅಂತೆಯೇ ಗ್ರಾಮೀಣ ಜನತೆಯ ಜೀವನ ಮತ್ತು ದುಡಿಮೆಯ ಪರಿಸ್ಥಿತಿಯನ್ನು ಸುಧಾರಿಸಲು ಕ್ರಮಗಳನ್ನೂ ತಕ್ಷಣ ಕೈಗೊಳ್ಳಬೇಕಾಗಿದೆ.

## ಬರ ಪರಿಹಾರ ಕಾರ್ಯಕ್ರಮ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಗಮನಿಸಿರುವಂತೆ ಕೇಂದ್ರ ಸರ್ಕಾರಕ್ಕೆ ದೇಶದಲ್ಲಿ ಉಂಟಾಗಿರುವ ಬರದ ಭೀಕರತೆ ಅರಿವಾಗಿಯೇ ಇಲ್ಲ. ಮುಂಗಾರು ಮಳೆಯ ಅಭಾವದಿಂದಾಗಿ ಹನ್ನೊಂದು ರಾಜ್ಯಗಳಲ್ಲಿ ತೀವ್ರವಾದ ಕ್ಷಾಮ ಪರಿಸ್ಥಿತಿಯಿದ್ದು ಕುಡಿಯುವ ನೀರಿನ ಕೊರತೆ, ಮೇವಿನ ಅಭಾವದಿಂದ ಜನ ಕಂಗೆಟ್ಟಿದ್ದಾರೆ. ಆಂಧ್ರದ ಮೆಹಬೂಬ್ ನಗರ, ಒರಿಸ್ಸಾದ ಕಾಲಾಹಂಡಿ ಮತ್ತು ಕೋರಾಪಟ್ ಜಿಲ್ಲೆಗಳಲ್ಲಿ ಭೀಕರ ಬರದಿಂದಾಗಿ ಸಾವಿರಾರು ಜನ ಉಪವಾಸದಿಂದ ಸತ್ತಿದ್ದಾರೆ. ಸರ್ಕಾರದ ಕಾಪು ದಾಸ್ತಾನಿನಲ್ಲಿ 25 ಮಿಲಿಯಟನ್ನುಗಳನ್ನು ಆಹಾರ ಧಾನ್ಯ ಸಂಗ್ರಹದಲ್ಲಿರುವಾಗ ಜನ ಉಪವಾಸ ಬಿದ್ದು ಸಾಯಬೇಕಾಗಿತ್ತೇ? ಕೃಷಿ ಕಾರ್ಮಿಕರ ಸಾಲವನ್ನು ಮಾಡುವುದು, ಹೊಸ ಬೆಳೆಗಾಗಿ ಸಾಲ ನೀಡುವುದು, ಸಾಂಕ್ರಾಮಿಕ ರೋಗಗಳು ಪಸರಿಸದಂತೆ ವೈದ್ಯಕೀಯ ಸವಲತ್ತು ಹಾಗೂ ಔಷಧಿ ಸಾಮಗ್ರಿಗಳನ್ನು ಒದಗಿಸಬೇಕು.

## ಕಾರ್ಮಿಕ ವಿರೋಧಿ ಧೋರಣೆಗಳು

ಬಂಡವಾಳಶಾಹಿಯಲ್ಲಿ ಆರ್ಥಿಕ ಮುಗ್ಗಟ್ಟು ಆಳವಾದಂತೆ ಈ ಮುಗ್ಗಟ್ಟಿನ ಹೊರೆಯನ್ನು ಕಾರ್ಮಿಕವರ್ಗದ ಮೇಲೆ ಜಾರಿಸಿ ಬಿಡಲು ಆಳುವ ವರ್ಗಗಳು ನಿರಂತರ ಪ್ರಯತ್ನಿಸುತ್ತಿವೆ. ಇಂತಹ ಪ್ರಯತ್ನಗಳ ವಿರುದ್ಧ ದುಡಿಯುವ ವರ್ಗ ಎಚ್ಚೆತ್ತು ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕರ ಸಂಘಟನೆಯ ಹಕ್ಕು, ಪ್ರಜಾಪ್ರಭುತ್ವವಾದಿ ಹಕ್ಕುಗಳ, ಮುಷ್ಕರ ಮಾಡುವ ಹಕ್ಕು ಇವೆಲ್ಲ ಆಳುವ ವರ್ಗಗಳ ಪಾಲಿಗೆ ತುಂಬಾ ಕಿರಿಕಿರಿಯುಂಟು ಮಾಡುವ ಅಡಚಣೆಗಳಾಗುತ್ತವೆ. ಆಳುವ ವರ್ಗಗಳು ತಮ್ಮ ಪ್ರಜಾಪ್ರಭುತ್ವದ ಸೋಗನ್ನು ಕೊಡವಿಕೊಂಡು ಕಾರ್ಮಿಕರ ಹಕ್ಕುಗಳ ಮೇಲೆ, ನಾಗರಿಕರ ಹಕ್ಕುಗಳ ಮೇಲೆ, ಕೊನೆಗೆ ಪ್ರಜಾಪ್ರಭುತ್ವದ ಮೇಲೆ ನಗ್ನ ಆಕ್ರಮಣ ನಡೆಸುವುದು ಇಂತಹ ಸಂದರ್ಭದಲ್ಲೇ. ಕಳೆದ ಹಲವಾರು ವರ್ಷಗಳಿಂದ ನಮ್ಮ ಕಾನೂನಿನ ಪುಸ್ತಕಗಳಲ್ಲಿರುವ 'ಎಸ್ಮಾ'ರಾಷ್ಟ್ರೀಯ ಭದ್ರತಾ ಶಾಸನ, ಮುಂತಾದ ಕರಾಳ ಕಾಯಿದೆಗಳು ಪ್ರಜಾಪ್ರಭುತ್ವವೆಂದು ಕರೆಸಿಕೊಳ್ಳಲ್ಪಡುವಯಾವುದೇದೇಶಕ್ಕೆ ಅವಮಾನಕಾರಿಯಾದವುಗಳು. ಈ ಕರಾಳ ಶಾಸನಗಳನ್ನು ರದ್ದುಗೊಳಿಸಿ ಕಾರ್ಮಿಕರಿಗೆ ನಾಗರಿಕರಿಗೆ ಪ್ರಜಾಪ್ರಭುತ್ವದ ಹಕ್ಕುಗಳನ್ನು ಸಂಪೂರ್ಣವಾಗಿ ನೀಡಬೇಕು. ಆಗಸ್ಟ್ ಮೂರರಂದಿನ ದೇಶಾದ್ಯಂತ ಕಾರ್ಮಿಕ ವರ್ಗದ ಪ್ರತಿಭಟನೆಯನ್ನು ಕಂಡ ಮತ್ತು ಇದೀಗ ಸರಕಾರ ಜಾರಿಗೆ ತರಬೇಕೆಂದಿರುವ ಕೈಗಾರಿಕಾ ಸಂಬಂಧ ಶಾಸನ, ಚೆಕ್ ಆಫ್ ಪದ್ಧತಿ, ಮತ್ತು ಬೆಲೆ ಸೂಚ್ಯಂಕದ ಮೂಲ ವರ್ಷವನ್ನು 1960 ರಿಂದ 1982ಕ್ಕೆ ಬದಲಾಯಿಸುವ ಕಾರ್ಮಿಕ ವಿರೋಧಿ ಕ್ರಮಗಳನ್ನು ಕೈಬಿಡಬೇಕು. ಇದು ರಾಷ್ಟ್ರೀಯ ಆಂದೋಲನ ಸಮಿತಿಯ ಒಕ್ಕೊರಲಿನ ಬೇಡಿಕೆ.

## ಆರ್ಥಿಕ ಸ್ವಾವಲಂಬನೆ

ಆರ್ಥಿಕಸ್ವಾವಲಂಬನೆಗೆ ತಿಲಾಂಜಲಿ ನೀಡಿರುವಂತಹ ಹೊಸ ಆರ್ಥಿಕ ನೀತಿಯನ್ನು ಕೇಂದ್ರ ಸರಕಾರ ಕೈಬಿಡಬೇಕು. ಹಳಸಿ ಹೋಗಿರುವ ವಿದೇಶೀ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ಮತ್ತು ಆ ಮೂಲಕ ದೇಶೀಯ ತಂತ್ರಜ್ಞಾನದ ಅಭಿವೃದ್ಧಿಗೆ ಕುಠಾರ ಪ್ರಾಯವಾಗಿರುವ ಕೇಂದ್ರ ಸರಕಾರದ ನೀತಿ ನಮ್ಮ ದೇಶದ ಅರ್ಥವ್ಯವಸ್ಥೆಯನ್ನು ವಿದೇಶೀ ಅವಲಂಬನೆಗೆ ತಳ್ಳಿದೆ. ಸಾರ್ವಜನಿಕ ಕ್ಷೇತ್ರದ ಪ್ರಾಮುಖ್ಯವನ್ನು ಕುಂಠಿತಗೊಳಿಸಲಾಗಿದೆ. ಅನಿವಾಸಿ ಭಾರತೀಯರಿಂದ ಬಂಡವಾಳವನ್ನು ಆಕರ್ಷಿಸುವ ನೆಪದಲ್ಲಿ ದೇಶೀಯ ಉದ್ದಿಮೆಗಳನ್ನು ವಿದೇಶೀ ಸ್ಪರ್ಧೆಗೆ ನೂಕಿ ಸರ್ವನಾಶ ಮಾಡುವ ಸನ್ನಾಹ ನಡೆಯುತ್ತಿದೆ. ತೀರಾ ಕಡಿಮೆ ಸಂಖ್ಯೆಯ ಪ್ರತಿಷ್ಠಿತ ವರ್ಗಕ್ಕೆ ಬೇಕಾದಂತಹ ಐಷಾರಾಮದ ವಸ್ತುಗಳನ್ನು ಮಾತ್ರ ಉತ್ಪಾದಿಸುವಂತಹ ಆರ್ಥಿಕ ಧೋರಣೆ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ಗಂಡಾಂತರಕಾರಿ ಈ ಧೋರಣೆಗಳನ್ನು ಕೇಂದ್ರ ಸರಕಾರ ಕೈಬಿಟ್ಟು ಬಡ ಜನತೆ ಮತ್ತು ದುಡಿಯುವ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವಂತಹ ಧೋರಣೆಗಳನ್ನು ಅನುಸರಿಸಬೇಕು.

## ದುರ್ಬಲ ವರ್ಗಗಳ ಮೇಲೆ ದಬ್ಬಾಳಿಕೆ

ಕೋಮುವಾದಿ ಮತ್ತು ಜಾತೀಯವಾದಿ ಶಕ್ತಿಗಳಿಗೆ ಉತ್ತೇಜನ ನೀಡುವ ಕೇಂದ್ರ ಸರ್ಕಾರದ ನೀತಿಯಿಂದಾಗಿ ಹರಿಜನ, ಗಿರಿಜನ, ಧಾರ್ಮಿಕ ಅಲ್ಪ ಸಂಖ್ಯಾತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ. ಕಾಂಗ್ರೆಸ್ ಪಕ್ಷವು ಹಿಂದೂ ಮುಸ್ಲಿಂ ಮತ್ತು ಇತರ ಮತಗಳ ಮೂಲಭೂತವಾದಿಗಳನ್ನು ಓಲೈಸುತ್ತಿದೆ. 1983ರಿಂದ 1985 ರವರೆಗಿನ ಎಂಟು ವರ್ಷಗಳಲ್ಲೇ ಹರಿಜನ ಗಿರಿಜನ ಮತ್ತು ಕೃಷಿ ಕಾರ್ಮಿಕರ ಮೇಲೆ ಎಸಗಲಾಗಿರುವ ಅಪರಾಧಗಳ ಸಂಖ್ಯೆ ಅರುವತ್ತು ಸಾವಿರಕ್ಕೂ ಮಿಕ್ಕಿದೆ. ಮಧ್ಯಯುಗದ ಕ್ರೂರ ಪದ್ಧತಿಯಾದ 'ಸತಿ ಸಹಗಮನ' ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಪುನರುಜ್ಜೀವನ ಹೊಂದುತ್ತಿದೆ. ಕಾಂಗ್ರೆಸ್ ಸರ್ಕಾರ ಈ ಕುರಿತು ಕಠಿಣವಾದ ಕ್ರಮಕೈಗೊಳ್ಳಲು ಮೀನ ಮೇಷ ಎಣಿಸಿದ್ದು ನಾಚಿಗೇಡು. ಹರಿಜನ–ಗಿರಿಜನ, ಧಾರ್ಮಿಕ ಅಲ್ಪ ಸಂಖ್ಯಾತರು ಮಹಿಳೆಯರು ಮತ್ತು ಸಮಾಜ ಇತರ ದುರ್ಬಲ ವರ್ಗಗಳ ಮೇಲಾಗುತ್ತಿರುವ ಆರ್ಥಿಕ ಅನ್ಯಾಯ ಮತ್ತು ದೈಹಿಕ ಹಲ್ಲೆಗಳನ್ನು ಕೊನೆಗಾಣಿಸಲು ಕೇಂದ್ರ ಸರ್ಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು.

ಈ ಬೇಡಿಕೆಗಳ ನೆಲೆಯಲ್ಲಿ ಸಾಮೂಹಿಕ ಚಳುವಳಿ ನಡೆಯಬೇಕೆಂದು ಕೇಂದ್ರ ಸಮಿತಿ ಕರೆಯಿತ್ತಿದೆ.

### ಜನವಾದಿ ಲೇಖಕರ ಸಂಘದ 3ನೇ ಸಮ್ಮೇಳನದಲ್ಲಿ ತೀವ್ರ ಚರ್ಚೆ

# ಸಮಕಾಲೀನ ಬರಹಗಾರರ ಮುಂದಿರುವ ಸವಾಲುಗಳು

ಹಿಂದಿ, ಉರ್ದು ಲೇಖಕರ ಪ್ರಜಾಸತ್ತಾತ್ಮಕ ಸಂಘಟನೆಯಾದ 'ಜನವಾದಿ ಲೇಖಕಸಂಘ'ದ ಮೂರನೇ ರಾಷ್ಟ್ರೀಯ ಸಮ್ಮೇಳನ ಸೆ.18ರಿಂದ 20 ರವರೆಗೆ ಭೂಪಾಲ್‌ನಲ್ಲಿ ನಡೆಯಿತು.ಆಳುವವರ್ಗ ಭೂಪಾಲ್‌ಅನ್ನು ಭಾರತದ ಸಾಂಸ್ಕೃತಿಕ ರಾಜಧಾನಿ ಎಂದು ಪರಿಗಣಿಸಿದರೆ ಪ್ರಜಾಸತ್ತಾತ್ಮಕ ಜನತೆಯ ದೃಷ್ಟಿಯಲ್ಲಿ ಭೂಪಾಲ್ ಪ್ರತಿಗಾಮಿ ಸಂಸ್ಕೃತಿಯ ಭದ್ರಕೋಟೆ ಎನಿಸಿದೆ. ಆಳುವ ವರ್ಗ ಸಾಂಸ್ಕೃತಿಕ ನೀತಿಯ ವಿರುದ್ಧ, ಮತ್ತು ಸಂಸ್ಕೃತಿಯ ನೌಕರಶಾಹೀಕರಣದ ವಿರುದ್ಧ,ಈಮೂರನೇ ಸಮ್ಮೇಳನ ಹೋರಾಟದ ಹೆಜ್ಜೆಯನ್ನಿರಿಸಿದೆ. ಉದ್ಘಾಟನಾ ಸಮಾರಂಭದಲ್ಲಿ ನೆರೆದಿದ್ದ ಸಾವಿರ ಲೇಖಕರು ಮತ್ತು ಸಾಹಿತ್ಯ ಪ್ರೇಮಿಗಳು ಆಳುವ ವರ್ಗದ ವ್ಯವಹಾರದ ಸರಕಾಗಿರಲು ತಾವು ಸಿದ್ಧರಿಲ್ಲವೆಂಬುದನ್ನು ರುಜುವಾತು ಮಾಡಿದ್ದಾರೆ. ಪ್ರಜಾಪ್ರಭುತ್ವದ ಆತ್ಮಗೌರವದ ಮತ್ತು ಮಾನವ ಮೌಲ್ಯಗಳ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ.

ಪ್ರಖ್ಯಾತ ಹಿಂದಿಬರಹಗಾರ ಶರತ್ ಜೋಷಿ ಉದ್ಘಾಟನಾ ಸಮಾರಂಭದಲ್ಲಿ ಪ್ರಥಮ ಭಾಷಣಕಾರರಾಗಿದ್ದರು. ಭೂಪಾಲದ 'ಭಾರತ್ ಭವನದ' ಧರ್ಮದರ್ಶಿಗಳು ಬರಹಗಾರರನ್ನು ಕಲಾವಿದರನ್ನು ಖರೀದಿ ಮಾಡಿ ಅವರನ್ನು ಗುಲಾಮರನ್ನಾಗಿ ಮಾಡಿ, ಆಳುವ ವರ್ಗದ ಮುದ್ದು ಪ್ರಾಣಿಗಳನ್ನಾಗಿ ಪರಿವರ್ತಿಸುವುದರಲ್ಲೇ ಕಾಲ ಕಳೆಯುತ್ತಿವುರುದನ್ನು ಹಾಸ್ಯಬೆರೆತ ತೀವ್ರತೆಯ ಮೊನಚಿನಲ್ಲೇ ಖಂಡಿಸಿದರು.

ಹೆಸರಾಂತ ನಾಟಕಕಾರರೂ, ಸಿನೆಮಾ ಮತ್ತು ನಾಟಕ ಕಲಾವಿದರೂ ಆದ ಉತ್ಪಲ್‌ದತ್ ತಮ್ಮ ಉದ್ಘಾಟನಾ ಭಾಷಣದಲ್ಲಿ ಬರಹಗಾರರಿಗೆ ಕರೆ ನೀಡುತ್ತಾ, ಬರಹಗಾರರು ಯಾರ ಪರವಾಗಿ ನಿಲ್ಲುವುದೆಂಬುದನ್ನು ತೀರ್ಮಾನಿಸಬೇಕು. ಹೆಚ್ಚಿನ ಸಮಯ ವ್ಯರ್ಥ ಮಾಡದೆ ಪ್ರಜಾಸತ್ತಾತ್ಮಕ ಚಳವಳಿಯ ಭಾಗವಾಗುವುದು ಅಥವ ಜನವಿರೋಧಿ ಶೋಷಕರ ಸೇವೆ ಮಾಡುವುದು ಇವೆರಡರಲ್ಲಿ ಒಂದನ್ನು ಆಯ್ದುಕೊಳ್ಳಬೇಕೆಂದರು. ಸರ್ಕಾರೀ ಮಾಧ್ಯಮಗಳಾದ ದೂರದರ್ಶನ ಮತ್ತು ರೇಡಿಯೋಗಳು ಕಲೆ ಮತ್ತು ಸಾಹಿತ್ಯವನ್ನು ಸೋಪು, ಕ್ರೀಮು, ಟವೇಲುಗಳನ್ನು ಮಾರಾಟ ಮಾಡಲು ಬಳಸುತ್ತಿದೆಯೆಂದು ತಮಾಷೆ ಮಾಡಿದರು. ಪ್ರಸ್ತುತ ವ್ಯವಸ್ಥೆಯ ಬಿಕ್ಕಟ್ಟು ಒಡ್ಡುತ್ತಿರುವ ಅಪಾಯಗಳನ್ನು ಲೇಖಕರು ಎದುರಿಸಲು ಸಿದ್ಧರಾಗಿ, ಆಳುವ ವರ್ಗದ ಸರ್ವಾಧಿಕಾರಿ ನೀತಿಯ ವಿರುದ್ಧ ಹೋರಾಡಿ ಹೊಸ ಜಗತ್ತಿನತ್ತ ಮುನ್ನಡೆಯಬೇಕೆಂದು ಅವರು ಕರೆ ನೀಡಿದರು.

**ಇತ್ತೀಚೆಗೆ ಭೂಪಾಲ್‌ನಲ್ಲಿ ನಡೆದ ಜನವಾದಿ ಲೇಖಕರ ಸಮ್ಮೇಳನ,ಹಿಂದೀ ಬರಹಗಾರರು ಮಾತ್ರವೇ ಅಲ್ಲ,ಭಾರತದ ಎಲ್ಲಾ ಬರಹಗಾರರ ಮುಂದಿರುವ ಸವಾಲುಗಳನ್ನು ಎದುರಿಸುವ ನಿರ್ಣಯ ಕೈಗೊಂಡಿದೆ.**

ಉದ್ಘಾಟನಾ ಅಧಿವೇಶನದಲ್ಲಿ ಸೌಹಾರ್ದ ಪ್ರತಿನಿಧಿಗಳಾದ ಪ.ಬಂಗಾಳದ ಇಂದ್ರನಾಥ್ ಬ್ಯಾನರ್ಜಿ, ಪಂಜಾಬ್‌ನ ಹರ್‌ಭಜನ್‌ಸಿಂಗ್‌ಹುಂಡಲ್ ಮತ್ತು ಕರ್ನೈಲ್ ಸಿಂಗ್‌ನಿಜ್ಜರ್ ಮುಂತಾದವರು ಮಾತನಾಡಿದರು.ಅಧಿವೇಶನದ ನಂತರ ಗ್ವಾಲಿಯರ್ ಮತ್ತು ಜಬ್ಬಲ್‌ಪುರ್‌ಗಳ ನಾಟಕತಂಡಗಳು ಕಿರುನಾಟಗಳನ್ನು ಪ್ರದರ್ಶಿಸಿದವು. ನಾಟಕಗಳನ್ನು ಪ್ರೇಕ್ಷಕರು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಸೆ. 19ರ ಅಧಿವೇಶನವು ಸಮಕಾಲೀನ ಬರವಣಿಗೆಯ ಮುಂದಿರುವ ಸವಾಲುಗಳನ್ನು ಚರ್ಚಿಸಿತು. ಬರಹದ ತಿರುಳು ಮತ್ತು ರೂಪಗಳ ಬಗ್ಗೆ ಹಾಗೂ ಆರೋಗ್ಯ ಪೂರ್ಣ ಸಾಹಿತ್ಯದ ಅಸ್ತಿತ್ವಕ್ಕೇ ಸವಾಲುಗಳನ್ನೊಡ್ಡುತ್ತಿರುವ ಪ್ರಸ್ತುತ ವ್ಯವಸ್ಥೆಯ ಬಗ್ಗೆ ಅಧಿವೇಶನವು ಪ್ರಾಮಾಣಿಕವಾದ ಅಭಿಪ್ರಾಯ ವಿನಿಮಯ ನಡೆಸಿತು.

ಎರಡನೆಯ ಅಧಿವೇಶನದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಯ ವರದಿಯನ್ನು ಮಂಡಿಸಲಾಯಿತು. ವರದಿಯಲ್ಲಿ ಉರ್ದು ಭಾಷೆಗೆ ಬೆಂಬಲ ನೀಡಲಾಗಿದೆ. ಹಿಂದಿ-ಉರ್ದು ಲೇಖಕರ ಸಂಘಟನೆಗಳ ಪೈಕಿ ಉರ್ದುವನ್ನು ಬೆಂಬಲಿಸಿರುವುದು ಜನವಾದಿ ಲೇಖಕ ಸಂಘ ಮಾತ್ರ ಎಂಬುದು ಗಮನಿಸಬೇಕಾದ ಅಂಶ. ಈ ಸಂಘ ತನ್ನ ಆರಂಭದಿಂದಲೂ ಪ್ರಜಾಪ್ರಭುತ್ವವಾದೀ ನಿಲುವನ್ನೇ ಅನುಸರಿಸುತ್ತಾ ಬಂದಿದೆ.

ಮೇಲಿನ ಎರಡೂ ಅಧಿವೇಶನಗಳ ನಡುವಿನ ಸಮಯದಲ್ಲಿ ಎಲ್ಲಾ ಪ್ರತಿನಿಧಿಗಳೂ ಭೂಪಾಲ್‌ಅನಿಲ ದುರಂತದ ಸ್ಥಳಕ್ಕೆ ಭೇಟಿಯಿತ್ತು, ದುರಂತದಲ್ಲಿ ಸತ್ತ ನಾಗರೀಕರಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಸಂಜೆಯ ನಂತರಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಕವಿಸಮ್ಮೇಳನದಲ್ಲಿ ಪ್ರಸಿದ್ಧ ಕವಿಗಳು ಕವನಗಳನ್ನು ವಾಚಿಸಿದರು. ಸಂಘದ ಮುಂಬೈ ಘಟಕ ಒಂದು ನಾಟಕವನ್ನು ಪ್ರದರ್ಶಿಸಿತು. ಜಾತಿವಾದೀ ಶಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಜನತೆಯನ್ನು ಪ್ರತ್ಯೇಕಿಸಲು ನಡೆಸುವ ಕುತಂತ್ರ ನಾಟಕದ ವಸ್ತುವಾಗಿತ್ತು.

ಸಮ್ಮೇಳನವು 43 ಸದಸ್ಯರ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಿತು. ಚಂದ್ರಬಾಲಿ ಸಿಂಗ್ ಅಧ್ಯಕ್ಷರಾಗಿ ಮತ್ತು ಓಂಪ್ರಕಾಶ್ ಗ್ರೆವಾಲ್ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು. ○

## ಹಂಚು ಕೆಲಸಗಾರರ 44ನೇ ವಾರ್ಷಿಕ ಮಹಾಸಭೆ

ಅಕ್ಟೋಬರ್ 11ರಂದು ಎಸ್.ಕೆ ಟೈಲ್ ಯೂನಿಯನ್ 44ನೇ ವಾರ್ಷಿಕ ಮಹಾ ಸಭೆ ಸಂಘದ ಅಧ್ಯಕ್ಷರಾದ ಕಾ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಧಾನ ಕಾರ್ಯದರ್ಶಿ ಕಾ. ಕೆ. ಮೂಸಬ್ಬ ಗತ ವರ್ಷದ ವರದಿ ಮಂಡಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯ ಸಿ.ಐ.ಟಿ. ಯು ಅಧ್ಯಕ್ಷ ಕಾ. ಎಸ್. ಸೂರ್ಯನಾರಾಯಣರಾವ್, ಕಾ. ಪಿ. ರಾಮಚಂದ್ರರಾವ್ ಕಾ.ಕೆ ಆರ್. ಶ್ರೀಯಾನ್‌ರವರಗಳು ಕಾರ್ಮಿಕರು ರಾಜಕೀಯ ಪ್ರಜ್ಞೆ ಬೆಳಸಿಕೊಳ್ಳಲು, ಹೊಸ ಸಮಾಜವ್ಯವಸ್ಥೆಯ ನಿರ್ಮಾಣಕ್ಕಾಗಿ ದುಡಿಯುವ ವರ್ಗ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸಲು ಕರೆನೀಡಿದರು. ರೈತ-ಕಾರ್ಮಿಕ ಸಖ್ಯತೆ ಬೆಳೆಸುವ ಅಗತ್ಯವನ್ನು ಹೊತ್ತಿ ಹೇಳಿದರು.

ರಾಜ್ಯ ಸರ್ಕಾರ ಪ್ರಕಟಿಸಿದ ಕನಿಷ್ಟ ಕೂಲಿ-ತುಟ್ಟಿ ಭತ್ತೆಯನ್ನು ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಯ ಹಂಚಿನ ಕಾರ್ಮಿಕರಿಗೆ ಜಾರಿಗೊಳಿಸದಿರುವುದನ್ನು ಖಂಡಿಸಿ ಹೋರಾಟ ರೂಪಿಸಲು, ಇ. ಎಸ್. ಐ. ಅವ್ಯವಸ್ಥೆ ಸರಿಪಡಿಸಲು, ರೈತರ ಹೋರಾಟಗಳಿಗೆ ಬೆಂಬಲಿಸಲು ಹಾಗೂ ದೇಶದ ಎಲ್ಲಾ ವಿಭಾಗದಲ್ಲೂ ಮುಗ್ಗಟ್ಟು ಎದುರಿಸಿ ವಿನಾಶದ ಹಾದಿ ಹಿಡಿದಿರುವ ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ, ನೀಡಿ ಮಧ್ಯಂತರ ಚುನಾವಣೆಗೆ ಒತ್ತಾಯಿಸುವ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಮುಂದಿನ ಸಾಲಿಗೆ ಅಧ್ಯಕ್ಷರಾಗಿ ಕಾ. ಅಬ್ರಹಾಂ ಕರ್ಕಡ, ಉಪಾಧ್ಯಕ್ಷರಾಗಿ ಕಾ. ಕೆ. ಮೂಸಬ್ಬ, ಕಾ. ಬಿ. ಮಾಧವ ಮತ್ತು ಕಾ.ಡಿ. ಗೋಪಾಲ್ ಪ್ರಧಾನ ಕಾರ್ಯದರ್ಶಿಯಾಗಿ ಕಾ. ಕೆ. ಶಂಕರ್, ಜಂಟಿಕಾರ್ಯದರ್ಶಿಗಳಾಗಿ ಕಾ. ಶಿವಾನಂದ ಕೋಡಿ, ಮತ್ತು ಕಾ. ಗಂಗಾಧರ ಶೆಟ್ಟಿ ಹಾಗೂ ಕೋಶಾಧಿಕಾರಿಯಾಗಿ ಕಾ. ಸಿ. ನಾರಾಯಣರವರನ್ನೊಳಗೊಂಡ ನೂತನ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಕಾ. ಕೆ. ಶಂಕರ್‌ರವರ ಧನ್ಯವಾದದೊಂದಿಗೆ ಸಭೆ ಮುಕ್ತಾಯಗೊಂಡಿತು. ○

## "ಸತಿ ಪದ್ಧತಿ" ವಿರುದ್ಧ ಮೆರವಣಿಗೆ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ಜಿಲ್ಲಾ ಸಮಿತಿ ಸೆಪ್ಟೆಂಬರ್ 4 ರಂದು ನೂರಾರು ಮಹಿಳೆಯರ ಪ್ರತಿಭಟನಾ ಮೆರವಣಿಗೆನಡೆಸಿ ರಾಜಸ್ಥಾನದ ಸಿಕಾರ ಜಿಲ್ಲೆಯ ದೇವರಲಾ ಗ್ರಾಮದಲ್ಲಿ ರೂಪಕನ್ವರ್ ಎಂಬ ಯುವತಿಯನ್ನು 'ಸತಿ' ಪದ್ಧತಿಗೆ ಬಲಿ ಕೊಟ್ಟ ಘಟನೆಯನ್ನು ಖಂಡಿಸಿದರು. ಜಿಲ್ಲಾಧಿಕಾರಿಗಳಿಗೆ, ಕರ್ನಾಟಕ, ರಾಜಸ್ತಾನ್, ಮುಖ್ಯಮಂತ್ರಿಗಳಿಗೆ ಹಾಗೂ ಪ್ರಧಾನ ಮಂತ್ರಿಗಳಿಗೆ ಮನವಿ ಪತ್ರವನ್ನು ಕಳುಹಿಸಲಾಯಿತು. ಅಕ್ಟೋಬರ್ 10 ರಂದು ಜಿಲ್ಲಾ ಸಮಿತಿ ಆಶ್ರಯದಲ್ಲಿ ಸಮಾವೇಶ,ವಿಚಾರಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲು ವಿವಿಧ ಸಂಘ ಸಂಸ್ಥೆಗಳ ಸಭೆಯೊಂದನ್ನು ಕರೆಯಲಾಗಿದೆ ಎಂದು ಮಹಿಳಾಸಂಘಟನೆ ಜಿಲ್ಲಾ ಅಧ್ಯಕ್ಷೆಯವರಾದ ಕಾ|ಶ್ಯಾಮಾಲಾ ಪೂಜಾರರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ○

## ರಾಯಚೂರು ಜಿಲ್ಲಾ ರಾಜಕೀಯ ಸಮಾವೇಶ ಯಶಸ್ವಿಗೊಳಿಸಿ

ಸಿ.ಪಿ.ಐ. (ಎಂ) ಪಕ್ಷದ ರಾಯಚೂರು ಜಿಲ್ಲಾ ಸಮಿತಿ ಸಭೆ ಅಕ್ಟೋಬರ್ 10ರಂದು ಜರುಗಿತು. ಅಕ್ಟೋಬರ್ 27ರಂದು ನಗರದ ಮಹಿಳಾ ಸಮಾಜದಲ್ಲಿ ರಾಜಕೀಯ ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಗಿದೆ. ಜಿಲ್ಲೆಯ ಎಲ್ಲಾ ತಾಲ್ಲೋಕುಗಳನ್ನು ಪ್ರತಿನಿಧಿಸುವ1,000 ಪ್ರತಿನಿಧಿಗಳನ್ನು ಅಣಿನೆರಿಸಲು10 ಸಾವಿರ ಕರಪತ್ರ ಮುದ್ರಿಸಿ, ಕನಿಷ್ಟ 30,000 ಜನರನ್ನು ತಲುಪುವ ಪ್ರಮುಖ ಹಳ್ಳಿಗಳಲ್ಲಿ ಬಹಿರಂಗ ಸಭೆ ನಡೆಸಿ, ವ್ಯಾಪಕ ಪ್ರಚಾರ ಕಾರ್ಯ ಕೈಗೊಳ್ಳಲು ನಿರ್ಧರಿಸಲಾಗಿದೆ. ಪಕ್ಷ ದೇಶದ ಮುಂದಿಟ್ಟಿರುವ 17 ಅಂಶಗಳ ಪರ್ಯಾಯ ಧೋರಣೆಗಳ ಕುರಿತು ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ.

ಎರಡನೆಯ ಹಂತವಾಗಿ ನವಂಬರ್ 5ರಿಂದ 15ರವರೆಗೆ ಎಲ್ಲಾ ತಾಲ್ಲೋಕು ಸಮಾವೇಶಗಳನ್ನು ನಡೆಸಲು ನಿರ್ಣಯಿಸಲಾಗಿದೆ.ಇದೇಸಂದರ್ಭದಲ್ಲಿ 'ಐಕ್ಯರಂಗ' ಪತ್ರಿಕೆಯನ್ನು ಕನಿಷ್ಟ500ಕ್ಕೆ ಹೆಚ್ಚಿಸಲು 300 ವಿಶೇಷಾಂಕ ಮಾರಾಟಮಾಡಲು ಜಿಲ್ಲಾ ಸಮಿತಿ ಸದಸ್ಯರಿಗೆ ಜವಾಬ್ದಾರಿ ವಹಿಸಲಾಗಿದೆ. ನವಂಬರ್ ಒಳಗೆ ಪಕ್ಷದ ರಾಜ್ಯ ಸಮಿತಿ ನಿಧಿಯನ್ನು ಸಂದಾಯಮಾಡಲಾಗುವುದು.

### ಇತರ ತೀರ್ಮಾನಗಳು

1. ನವಂಬರ್ ತಿಂಗಳ ಮೊದಲ ವಾರದಲ್ಲಿ ಜಿಲ್ಲೆಯ ಮಂಡಲ ಪಂಚಾಯಿತಿ ಸದಸ್ಯರ ಸಮಾವೇಶವನ್ನು ಹಟ್ಟಿಯಲ್ಲಿ ನಡೆಸುವುದು.

2. ಶಾಖೆ ಕಾರ್ಯದರ್ಶಿಗಳಿಗೆ ಮೂರು ದಿವಸದ ತರಬೇತಿ ಶಿಬಿರ.

3. ಪಕ್ಷದ 12ನೇ ಕಾಂಗ್ರೆಸ್‌ನ ರಾಜಕೀಯ-ಸಂಘಟನಾ ಕರೆಯ ಆಧಾರದಲ್ಲಿ ಜಿಲ್ಲೆಯಲ್ಲಿ ಪಕ್ಷ ಬೆಳೆಸಲು, ಪ್ರಜಾಸತ್ತಾತ್ಮಕ ಕೇಂದ್ರ ಕಟ್ಟಲು, ಕಾರ್ಯಯೋಜನೆ ರೂಪಿಸಲು ತೀರ್ಮಾನಿಸಲಾಗಿದೆ. ಪಕ್ಷ ಸಾಮೂಹಿಕ ಸಂಘಟನೆಯ ಸಂಘಟನಾ ಪರಿಸ್ಥಿತಿ ಕುರಿತು ವಿಶೇಷ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ. ○



## ಸಾಗಿದೆ ಭಾರತ ಜನ ವಿಜ್ಞಾನ ಜಾಥಾ

ದೇಶದ ಪ್ರತಿಯೊಬ್ಬ ಮಾನವನಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ತನ್ಮೂಲಕ ದೇಶದ ಪ್ರಗತಿ ಅಭಿವೃದ್ಧಿ ಸಾಧಿಸಿ ಜನರ ಕಲ್ಯಾಣಕ್ಕಾಗಿ, ಶಾಂತಿಗಾಗಿ, ಸ್ವಾಯತ್ತತೆಗಾಗಿ, ಜನಸಾಮಾನ್ಯರ ಜಾಗೃತಿ ಉಂಟುಮಾಡಲುಭಾರತದಾದ್ಯಂತಸಂಚರಿಸುವ 'ಭಾರತ ಜನ ವಿಜ್ಞಾನ ಜಾಥ' ಕರ್ನಾಟಕ ರಾಜ್ಯವನ್ನು ಅಕ್ಟೋಬರ್ 18 ರಂದುಪ್ರವೇಶಿಸುವುದು ಪ್ರತಿಯೊಂದು ಸ್ಥಳದಲ್ಲಿಯೂ ವಸ್ತುಪ್ರದರ್ಶನ, ಹಾಡು, ನಾಟಕ, ನೃತ್ಯ, ಕಲಾ ಪ್ರದರ್ಶನ, ವಿಜ್ಞಾನ ಕುರಿತು ರಸಪ್ರಶ್ನೆ, ಉಪನ್ಯಾಸ ಕಾರ್ಯಕ್ರಮಗಳು ಜರುಗುತ್ತದೆ. ದ.ಭಾರತದ ತಂಡ ಅಕ್ಟೋಬರ್ 2 ರಂದು ಮದ್ರಾಸ್‌ನಿಂದ ಹೊರಟು ತಮಿಳುನಾಡು, ಕೇರಳದ ಮೂಲಕ 18 ರಂದು ಮಂಗಳೂರು ತಲುಪಿದೆ.

ಜನ ವಿಜ್ಞಾನ ಜಾಥಾಮಂಗಳೂರು ಸಮಿತಿ ವೈವಿಧ್ಯಮಯ ಕಾರ್ಯಕ್ರಮ ರೂಪಿಸಿದೆ. ಅಕ್ಟೋಬರ್ 11 ರಿಂದ 17ರವರೆವಿಗೆ ಸುಮಾರು ಸ್ಥಳಗಳಲ್ಲಿ ವಿಜ್ಞಾನ ಭಿತ್ತಿಪತ್ರ,ಪುಸ್ತಕಪ್ರದರ್ಶನ, ಬೀದಿನಾಟಕ, ಚಲನಚಿತ್ರ ಪ್ರದರ್ಶನ, ಏರ್ಪಡಿಸಲಾಗಿದೆ. ಅಕ್ಟೋಬರ್ 10 ರಿಂದ 15ರವರೆವಿಗೆ ಮಕ್ಕಳಿಗಾಗಿ ವಿಜ್ಞಾನ ಶಿಬಿರ, 11 ರಿಂದ 18ರವರೆವಿಗೆ ಮಂಗಳೂರು ಆಕಾಶವಾಣಿಯಲ್ಲಿ ಸಂಜೆ 7.45ರಿಂದ 'ವಿಜ್ಞಾನರೂಪಕ' ಪ್ರಸಾರಗೊಂಡಿದೆ. 18ರಂದು ಕಸ್ತೂರಬಾ ಮೆಡಿಕಲ್ ಕಾಲೇಜು ಬಳಿಯಿಂದ ಪುರಭನಕ್ಕೆ ಮೆರವಣಿಗೆ ನಡೆಸಿ ಜಾಥಾವನ್ನು ಸ್ವಾಗತಿಸಿ ಉದ್ಘಾಟಿಸಲಾಗಿದೆ.

ರಾಜ್ಯದಲ್ಲಿ ಸಂಚರಿಸುವ ಜಾಥದ ದಿನಾಂಕ ಈ ಕೆಳಕಂಡಂತಿದೆ. ಅಕ್ಟೋಬರ್ 24,25, ಮತ್ತು 26 ರಂದು ತುಮಕೂರಿನ ಶ್ರೀಸಿದ್ಧಗಂಗಾ ಕಿರಿಯ ಕಾಲೇಜನಲ್ಲಿ 3ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನವನ್ನು ನಡೆಸಲಾಗುವುದು. ಪ್ರತಿನಿಧಿಗಳಾಗಿ ಭಾಗವಹಿಸುವವರು 20ರೂ. ಪ್ರತಿನಿಧಿ ಶುಲ್ಕ ನೀಡಿ ಭಾಗವಹಿಸಬಹುದು. ○

# ಬಿ. ಜೆ. ಪಿ. ಯ ಬೊಗಳೆ

– ಇ. ಎಂ. ಎಸ್. ನಂಬೂದಿರಿಪಾಡ್

**ಬಿ.ಜೆ.ಪಿ.ಯ ಅಪಪ್ರಚಾರ, ಬಿ.ಜೆ.ಪಿ.ಗೆ ಬೆಂಬಲವಾಗಿ ಗುತ್ತೇದಾರಿ ಪತ್ರಿಕೆಗಳ ಅಪಪ್ರಚಾರ ನಿರಂತರವಾಗಿ ನಡೆಯುತ್ತಿದೆ. ಇದರಲ್ಲೊಂದಕ್ಕೆ ಉತ್ತರ ನೀಡಿದ್ದಾರೆ. ಕಾ.ಇ.ಎಂ.ಎಸ್.**

ಹಿಂದೂ ಮೂಲಭೂತವಾದಿಗಳ ಮುಖವಾಣಿಯಾಗಿರುವ 'ದಿ ಆರ್ಗನೈಸರ್' ತನ್ನ ಅಕ್ಟೋಬರ್ 3ರ ಸಂಚಿಕೆಯಲ್ಲಿ ಮೂರೂಲೇಖನಗಳನ್ನು ಪ್ರಕಟಿಸಿದೆ, ಇವು ಮೂರು ಒಂದೇ ಧಾಟಿಯಲ್ಲಿವೆ. ಹರಿಯಾಣದ ಮುಖ್ಯ ಮಂತ್ರಿ ದೇವಿಲಾಲರು ಸೂರಜ್ ಕುಂಡ್‌ನಲ್ಲಿ ಕರೆದಿದ್ದ ಸಭೆಯನ್ನು ಕುರಿತು "ಒಂಭತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಒಂಬತ್ತು ಪಕ್ಷಗಳ ಒಪ್ಪಂದ" ಎಂಬ ಲೇಖನ ಬರೆದಿರುವ ಈ ಪತ್ರಿಕೆ" "ಸೂರಜ್‌ಕುಂಡ್ ಸಭೆ ಒಂದು ಅತ್ಯಂತ ಮಹತ್ವದ ಬೆಳವಣಿಗೆ. ಅದು 1977ರಲ್ಲಿ ಇಂದಿರಾಗಾಂಧಿ ಸರಕಾರದ ಪತನಕ್ಕೆ ಕಾರಣವಾದಂತಹ 1974ರ ನಾಲ್ಕು ಪಕ್ಷಗಳ ಚಳುವಳಿಯನ್ನು ನೆನಪಿಗೆ ತರುವಂತಹದು. ಸ್ವಾರಸ್ಯದ ಸಂಗತಿಯೆಂದರೆ 1974–75ರಲ್ಲೂ ಕಮ್ಯುನಿಸ್ಟರು ಈ ಚಳುವಳಿಯೊಂದಿಗೆ ಸೇರಿರಲಿಲ್ಲ. ಸಿ.ಪಿ.ಐ. ಯಂತೂ ಇಂದಿರಾಗಾಂಧಿಯನ್ನೇ ಬೆಂಬಲಿಸಿತ್ತು. ಈಗಲೂ ಸಹ ಕಮ್ಯುನಿಸ್ಟರು ನಮ್ಮಿಂದ ದೂರವಿರಲು ನಿರ್ಧರಿಸಿದ್ದಾರೆ. ಆದರೂ ಕಮ್ಯುನಿಸ್ಟರಿಲ್ಲದೆನೇ ಪ್ರಜಾಪ್ರಭುತ್ವವಾದಿ ವಿರೋಧ ಪಕ್ಷಗಳು ಭ್ರಷ್ಟ ಕಾಂಗ್ರೆಸ್‌ನ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡುವ ಸಾಮರ್ಥ್ಯ ಹೊಂದಿವೆ"ಎಂದಿದೆ. ಇದೇ ಪತ್ರಿಕೆಯ ಇನ್ನೊಬ್ಬ ವಿಶೇಷ ವರದಿಗಾರರು ತಮ್ಮ ಲೇಖನದಲ್ಲಿ "ಜೆ.ಪಿ ಅವರು 1975ರಲ್ಲಿ ತಮ್ಮ ಸಂಪೂರ್ಣ ಕ್ರಾಂತಿಯ ಚಳುವಳಿಯನ್ನು ಪ್ರಾರಂಭಿಸಿದಾಗ ಕಮ್ಯುನಿಸ್ಟರು ಅದರಿಂದ ದೂರವಿದ್ದರು; ಆ ಬಳಿಕ ಅನೇಕ ಕಾಮ್ರೇಡ್‌ಗಳು ಅದಕ್ಕಾಗಿ ಪಶ್ಚಾತ್ತಾಪ ಪಟ್ಟಿದ್ದಿದೆ. ಅದೇ ರೀತಿ ಈಗಲೂ ಅವರುಹೊರಗಡೆ ಚಳಿಯಲ್ಲೇ ಉಳಿಯ ಬೇಕಾಗುತ್ತದೆ" ಎಂದಿದ್ದಾರೆ. ಕೊನೆಗೆ ಆರ್ಗನೈಸರ್‌ನ ಸಂಪಾದಕೀಯವೂ "ಪ್ರಜಾಪ್ರಭುತ್ವವಾದಿ ವಿರೋಧ ಪಕ್ಷಗಳ ಕಡೆಗೆ ಕಮ್ಯುನಿಸ್ಟರು ತೋರಿಸುತ್ತಿರುವ ವರ್ತನೆಯಲ್ಲಿ ಗಮನಿಸಲೇ ಬೇಕಾದ ಕೆಲವೊಂದು ಅಂಶಗಳಿವೆ. ಇಂದು ಕಾಂಗ್ರೆಸ್‌ನ ವಿರುದ್ಧ ದೊಡ್ಡದೊಂದು ಬಂಡಾಯವೇಳುವಸಾಧ್ಯತೆಯಿದೆಯಲ್ಲದೆ ಕಮ್ಯುನಿಸ್ಟೇತರ ಪಕ್ಷಗಳ ಐಕ್ಯತೆಯೂ ಸಾಧ್ಯವಾಗಿದೆ. ಹಾಗೆಯೇ ಕಮ್ಯುನಿಸ್ಟರನ್ನು ದೇಶದ ರಾಜಕಾರಣದಿಂದ ಸಂಪೂರ್ಣವಾಗಿ ಪ್ರತ್ಯೇಕವಾಗಿರಿಸುವ ಸಾಧ್ಯತೆಗಳೂ ನಿಚ್ಚಳವಾಗಿವೆ" ಎಂದಿದೆ.

## ಈ ಸಂತೋಷ–ಅಲ್ಪಾಯುಷಿ

ಕಮ್ಯುನಿಸ್ಟರು ದೂರ ಉಳಿದಿರುವುದರ ಬಗ್ಗೆ ಆರ್ಗನೈಸರ್‌ನ ಸಂತೋಷ ಧೀರ್ಘಕಾಲ ಉಳಿಯಲಿಲ್ಲ. ಎಡ ಪಕ್ಷಗಳ ಜೊತೆಗೆ ರಾಜಕೀಯ ಮತ್ತು ಸಾಮೂಹಿಕ ಹೋರಾಟಗಳಲ್ಲಿ ಸಹಕಾರ ನೀಡುತ್ತಿದ್ದ ಹಲವು ಪಕ್ಷಗಳು ಸೂರಜ್‌ಕುಂಡ್ ಸಭೆಯಲ್ಲಿ ಭಾಗವಹಿಸಿದ್ದುದು ನಿಜ. ಆದರೆ ಅದರ ಅರ್ಥ ಆರ್ಗನೈಸರ್ ಕನಸು ಕಾಣುತ್ತಿರುವ ಹಾಗೆ ಎಡಪಕ್ಷಗಳನ್ನು ದೂರವಿರಿಸಲು ಈ ಪಕ್ಷಗಳು ಬಿ.ಜೆ.ಪಿ. ಜೊತೆಗೆ ಸೇರಲು ಸಿದ್ಧವಿವೆ ಎಂದಲ್ಲ. ನಿಜ ಹೇಳಬೇಕೆಂದರೆ ಸೂರಜ್‌ಕುಂಡ್ ಸಭೆಯಲ್ಲಿ ಭಾಗವಹಿಸಿದ್ದ ಅನೇಕ ಪಕ್ಷಗಳ ವಕ್ತಾರರು ಎಡ ಪಕ್ಷಗಳ ಬೆಂಬಲವನ್ನು ಗಳಿಸಿಕೊಳ್ಳಲು ತಾವು ಖಂಡಿತ ಪ್ರಯತ್ನಿಸುವುದಾಗಿ ಪದೇ ಪದೇ ಸಾರಿದ್ದರು. ಸೂರಜ್‌ಕುಂಡ್ ಸಭೆಯಲ್ಲಿ ಅಂಗೀಕರಿಸಲಾದನಿರ್ಣಯದಲ್ಲೂ'ಕೋಮುವಾದವೊಂದು ಅನಿಷ್ಟವೆಂದೂ ಅದರ ವಿರುದ್ಧ ಹೋರಾಟ ನಡೆಸಬೇಕೆಂದೂ ಕರೆ ನೀಡಲಾಗಿತ್ತು. ಇಂತಹ ನಿರ್ಣಯವನ್ನು ಅಂಗೀಕರಿಸಿದ್ದ ಸಭೆಯಲ್ಲಿ ಬಿ.ಜೆ.ಪಿ. ಏಕೆ ಭಾಗವಹಿಸಿತೋ ಹೇಳೋಕೆ ಸಾಧ್ಯವಿಲ್ಲ.

## ದೂರೀಕರಿಸುವುದು ಯಾರನ್ನು?

ನಮ್ಮ ನೆನಪುಗಳನ್ನು ಸ್ವಲ್ಪ ಕೆದಕಿ ನೋಡೋಣ. 1983–84ರಲ್ಲಿ ಏರ್ಪಡಿಸಲಾಗಿದ್ದ ಸಕಲ ವಿರೋಧ ಪಕ್ಷಗಳ ಹಲವಾರು ಅಖಿಲ ಭಾರತ ಸಮಾವೇಶಗಳ ಪೈಕಿ (ಕಾನ್‌ಕ್ಲೇವ್ಸ್ ಎಂದೇ ಪತ್ರಿಕೆಗಳು ಇವನ್ನು ಕರೆಯುತ್ತಿದ್ದವು)ಮೊದಲನೆಯದರಲ್ಲಿಬಿ.ಜೆ.ಪಿ. ಭಾಗವಹಿಸಿತ್ತು. ಈ ಸಮ್ಮೇಳನದಲ್ಲಿ ಕೋಮುವಾದದ ವಿರುದ್ಧ ಒಂದು ನಿರ್ಣಯವನ್ನು ಅಂಗೀಕರಿಸಲಾಗಿತ್ತು. ವಿಜಯವಾಡದಲ್ಲಿ ನಡೆದ ಈ ಮೊದಲ ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯದ ಬಗ್ಗೆ ಬಿ.ಜೆ.ಪಿ ಪ್ರತಿನಿಧಿಗೆ ಸಮಾಧಾನವಾಗಲಿಲ್ಲ. ಆಮೇಲೆ ನಡೆದ ಮೂರು ಅಖಿಲ ಭಾರತ ಸಮಾವೇಶಗಳಲ್ಲಿ ಯಾವುದರಲ್ಲೂ ಬಿ.ಜೆ.ಪಿ. ಭಾಗಹಿಸಲಿಲ್ಲ. ಅಂದಿನಿಂದ ಇಂದಿನವರೆಗೂ ಬಿ.ಜೆ.ಪಿ.ಯನ್ನು ಹೊರತುಪಡಿಸಿದ ಇತರ ವಿರೋಧ ಪಕ್ಷಗಳು ಜಂಟಿ ಕಾರ್ಯಾಚರಣೆ ನಡೆಸುತ್ತಲೇ ಇವೆ. ತೀರಾ ಇತ್ತೀಚೆಗಿನ ಉದಾಹರಣೆಯೆಂದರೆ ರಾಷ್ಟ್ರಾಧ್ಯಕ್ಷರ ಚುನಾವಣೆ. ಇದರಲ್ಲೂ ಬಿ.ಜೆ.ಪಿ ಇತರ ವಿರೋಧ ಪಕ್ಷಗಳ ಐಕ್ಯ ನಿಲುವೆಯಿಂದ ಪ್ರತ್ಯೇಕವಾಗಿ ದೂರನಿಂತಿದೆ.

ಇನ್ನೂ ಸ್ವಲ್ಪ ಹಿಂದಿನ ಕಾಲಕ್ಕೆ ಹೋಗೋಣ ಜನತಾ ಪಕ್ಷ ಹಾಗೂ ಜನತಾ ಸರಕಾರ ಬಿಕ್ಕಟ್ಟಿನಲ್ಲಿ ಸಿಕ್ಕಿ ಕೊಂಡದ್ದು ಮತ್ತು ಜನತಾ ಸರಕಾರ ಪತನವಾದದ್ದು ಹೇಗೆ? ದ್ವಿಸದಸ್ಯತ್ವದ ಪ್ರಶ್ನೆಯಲ್ಲೇ ಅಲ್ಲವೇ? ಯಾರೊಬ್ಬರೂ ಏಕಕಾಲಕ್ಕೆ ಜನತಾಪಕ್ಷ ಮತ್ತು ಆರ್.ಎಸ್.ಎಸ್.ನ ಸದಸ್ಯರಾಗಬಾರದೆಂದು ಆಗಿನ ಹೆಚ್ಚಿನ ಜನತಾ ಮುಂದಾಳುಗಳು ಒತ್ತಾಯಿಸಿದ್ದರು. ಜನತಾ ಸರಕಾರದ ಪತನ ಆದ ಮೇಲೂ ಈ ವಿವಾದ ಬಹುಕಾಲ ಮುಂದುವರಿಯಿತು, ಮತ್ತು ಈ ಕಾರಣಗಳಿಗಾಗಿಯೇ ಆರೆಸ್ಸೆಸ್‌ನ ಸಕ್ರಿಯ ಕಾರ್ಯಕರ್ತರನ್ನು ಉನ್ನತ ಮುಂದಾಳುಗಳಾಗಿ ಹೊಂದಿದ್ದ ಬಿ.ಜೆ.ಪಿ. ಜನ್ಮ ತಳೆಯಿತು ಬಿ.ಜೆ.ಪಿ.ಯ ರಚನೆಯಾದಾಗಲೆ ಅದು ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾದ ಏಕಮೇವ ಪಕ್ಷವಾಗಿ ಬೆಳೆದುಬರುವುದೆಂದು ಅದರ ಮುಂದಾಳುಗಳು ಬಡಾಯಿಕೊಚ್ಚಿಕೊಂಡಿದ್ದರು.

ಆದರೆ ಈ ಬಡಾಯಿಯನ್ನು ಜನಸಾಮಾನ್ಯರು ನಂಬುವುದಿಲ್ಲವೆಂಬುದನ್ನು ತಿಳಿದುಕೊಳ್ಳಲು ಬಿ.ಜೆ.ಪಿ. ಮುಂದಾಳುಗಳಿಗೆ ಬಹಳ ಕಾಲ ಬೇಕಾಗಲಿಲ್ಲ. ಆದಕ್ಕೆ ಅವರೀಗ ಕಾಂಗ್ರೆಸ್ಸಿಗೆ ಬದಲಿಯಾಗಿ ವಿರೋಧ ಪಕ್ಷಗಳ ಐಕ್ಯರಂಗವೊಂದರ ನಿರ್ಮಾಣ ಮಾಡಬೇಕೆಂದುಪ್ರಯತ್ನಿಸುತ್ತಿದ್ದಾರೆ.ಆರೆಸ್ಸೆಸ್‌ನ ಯಜಮಾನಿಕೆಯಲ್ಲಿರುವ ಒಕ್ಕೂಟವೊಂದರ ಜೊತೆಗೆ ಎಡ ಪಕ್ಷಗಳು ಮತ್ತು ಇತರ ಜಾತ್ಯಾತೀತ ವಿರೋಧ ಪಕ್ಷಗಳು ಸಹಕಾರ ಮಾಡುವಂತಹ ರಾಜಕೀಯ ಸ್ಥಿತಿಯೊಂದರ ನಿರ್ಮಾಣವೇ ಅವರ ಗುರಿ.

## ಹಿಂದೂ ರಾಷ್ಟ್ರ

ಹಿಂದೆ ಜನತಾಪಕ್ಷದೊಳಗೆ ಮತ್ತು ಇದೀಗ ಬಿ.ಜೆ.ಪಿ. ಹಾಗೂ ಇತರ ವಿರೋಧ ಪಕ್ಷಗಳ ನಡುವೆ ನಡೆಯುತ್ತಿರುವ ಹೋರಾಟದಲ್ಲಿ ಕಾಣಿಸಿಕೊಂಡ ಮುಖ್ಯ ಪ್ರಶ್ನೆ ಇಷ್ಟೆ. ಕಾಂಗ್ರೆಸ್ಸನ್ನು ಪರಿಣಾಮಕಾರಿಯಾಗಿ ವಿರೋಧಿಸಬೇಕೆಂದಿರುವ ವಿರೋಧ ಪಕ್ಷಗಳ ಒಕ್ಕೂಟದೊಳಗೆ ಭಾರತ ದೇಶವು ಹಿಂದೂಗಳಿಗೆ ಮಾತ್ರ ಸೇರಿದ್ದೆನ್ನುವ ಮೂರ್ಖ ಸಿದ್ಧಾಂತಕ್ಕೆ ಅಂಟಿಕೊಂಡಿರುವ ಪಕ್ಷವೂ ಇರಲು ಸಾಧ್ಯವೆ? ಬಿ.ಜೆ ಪಿ. ಇಂಥದ್ದೇ ಪಕ್ಷ. ಬಿ.ಜೆ.ಪಿ.ಯ ವಕ್ತಾರ ಕೆ.ಆರ್. ಮಲ್ಕಾನಿಯವರು ಇತ್ತೀಚೆಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದಿರುವ ಲೇಖನವೊಂದರಲ್ಲಿ ಬಿ.ಜೆ.ಪಿ.ಯ ಹಿಂದೂ ಧರ್ಮ ನಿಷ್ಠೆಯನ್ನು ಸಮರ್ಥಿಸಿಕೊಂಡಿದ್ದಾರೆ. ಈ ಸಿದ್ಧಾಂತ ನಮ್ಮ ದೇಶದಲ್ಲಿ ನಾವು ಕಟ್ಟಿ ಬೆಳೆಸಿರುವ ಪರಂಪರೆಗಳಿಗೆ ವಿರುದ್ಧವಾಗಿದೆ. ನಮ್ಮ ಸ್ವಾತಂತ್ರ್ಯ ಚಳುವಳ ಕೂಡಾ ಈ ದೇಶವು ಹಿಂದೂ, ಮುಸ್ಲಿಂ, ಕ್ರೈಸ್ತ ಸಿಖ್ ಮತ್ತಿತರ ಎಲ್ಲಾ ಧರ್ಮದ ಅನುಯಾಯಿಗಳ ಮಾತೃಭೂಮಿ ಎಂಬ ತತ್ವವನ್ನು ಒಪ್ಪಿ ಕೊಂಡಿತ್ತು. ಸ್ವಾತಂತ್ರ್ಯ ಹೋರಾಟದ ಅನೇಕ ಮುಂದಾಳುಗಳು–ಮಹಾತ್ಮ ಗಾಂಧಿ, ಲೋಕಮಾನ್ಯ ತಿಲಕ್ ಮೊದಲಾದವರೂ ಸೇರಿದಂತೆ ಹೆಚ್ಚಿನವರು ಕಟ್ಟಾ ಹಿಂದೂ ಮತಾವಲಂಬಿಗಳಾಗಿದ್ದರೂ ಅವರೆಲ್ಲಾ ಉಜ್ವಲ ದೇಶಪ್ರೇಮಿಗಳಾಗಿದ್ದರು. ಹಿಂದೂ ಧರ್ಮದ ನಿಷ್ಠೆ ಅವರ ದೇಶಪ್ರೇಮಕ್ಕೆ ಅಡ್ಡಿಯುಂಟು ಮಾಡುವುದಕ್ಕೆ ಅವರೆಂದೂ ಅವಕಾಶ ಕೊಡಲಿಲ್ಲ. ಆರೆಸ್ಸೆಸ್ ನಂತಹ ಹಿಂದೂ ಮತಾಂಧರಿಗೆ ಇದು ಸಹನೆಯಾಗಲಿಲ್ಲ.ಒಬ್ಬ ಆರೆಸ್ಸೆಸ್‌ನ ಕಾರ್ಯಕರ್ತ ಗಾಂಧೀಜಿಯವರನ್ನು ಕೊಲೆಗೈದ. ಇಂತಹ ಹಿಂದೂ ಮತಾಂಧತೆಯ ಸಿದ್ಧಾಂತದ ಆಧಾರದ ಮೇಲೆ ರಾಜೀವ್‌ಗಾಂಧಿಗೆದುರಾಗಿ ವಿರೋಧ ಪಕ್ಷಗಳ ಒಕ್ಕೂಟವನ್ನು ಕಟ್ಟಬೇಕೆಂದು ಮಲ್ಕಾನಿಯಂತಹ ಬಿ.ಜೆ.ಪಿ.ಯ ವಕ್ತಾರರು ಉಪದೇಶಿಸುತ್ತಿದ್ದಾರೆ!

## ಕೋಮುವಾದದ ವಿರುದ್ಧ ಹೋರಾಟ

ಜನರು ತಮ್ಮ ಮತ, ಧರ್ಮ ಮತ್ತು ಆಚರಣೆಗಳಲ್ಲಿ ವಿಶ್ವಾಸವಿರಿಸಿಕೊಳ್ಳುವುದನ್ನು ನಾವು ಯಾರೂ ವಿರೋಧಿಸುವುದಿಲ್ಲ. ಆದರೆ ಮತ, ಧರ್ಮ ಮತ್ತು ಆಚರಣೆಯ ಸ್ವಾತಂತ್ರ್ಯ ಹಿಂದೂಗಳಿಗೆ ಮಾತ್ರ ಅಲ್ಲ; ಮುಸ್ಲಿಂ, ಕ್ರೈಸ್ತ,ಸಿಖ್ ಮತ್ತಿತರ ಮತದವರಿಗೂ ಯಾವುದೇ ಮತದಲ್ಲಿ ವಿಶ್ವಾಸ ಇಲ್ಲದವರಿಗೂ ಈ ಸ್ವಾತಂತ್ರ್ಯ ಸಮಾನವಾಗಿರಬೇಕು. ರಾಜಕೀಯ, ಶಿಕ್ಷಣ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳೊಳಗೆ ಧಾರ್ಮಿಕ ನಂಬಿಕೆಗಳು ಪ್ರವೇಶಿಸುವುದಕ್ಕೆ ಬಿಡಬಾರದು. ಇವೆಲ್ಲ ಸಂಪೂರ್ಣವಾಗಿ ಧರ್ಮ ನಿರಪೇಕ್ಷತೆಯ ಮೇಲೆ ಆಧರಿಸಿಕೊಂಡಿರಬೇಕು. ಅದಕ್ಕಾಗಿಯೇ ನಾವು–ಅಂದರೆ ಎಡ ಮತ್ತು ಜಾತ್ಯಾತೀತ ಚಳುವಳಿಗೆ ಸೇರಿದವರು ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಮತ್ತಿತರ ಧಾರ್ಮಿಕ ಮೂಲಭೂತವಾದಿತನ ಮತ್ತು ಮೂಢ ನಂಬಿಕೆಗಳನ್ನು ಖಡಾ ಖಂಡಿತವಾಗಿ ವಿರೋಧಿಸುತ್ತೇವೆ. ಇದು ಕೇವಲ ಪ್ರಚಾರ, ಪ್ರಕ್ಷೋಭೆಯ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿಲ್ಲ; ಅದೊಂದು ಕ್ರಿಯಾತ್ಮಕ ರಾಜಕೀಯ ಚಳುವಳಿಯಾಗಿ ಬೆಳೆದು ಬರುತ್ತಿದೆ. ಅಕ್ಟೋಬರ್ 12ರಂದು ದೆಹಲಿಯಲ್ಲಿ ನಡೆದ ಕೋಮುವಾದ, ಪ್ರತ್ಯೇಕತಾವಾದಗಳ ವಿರೋಧಿ ರಾಜಕೀಯ ಸಮಾವೇಶ (ಇದರಲ್ಲಿ ನಾಲ್ಕು ಎಡ ಪಕ್ಷಗಳು ಇತರ ವಿರೋಧ ಪಕ್ಷಗಳ ಸಹಕಾರದಿಂದ ಮುತು ವರ್ಜಿ ವಹಿಸಿವೆ. ಇವುಗಳಲ್ಲಿ ಸೂರಜ್ ಕುಂಡ್ ಸಭೆಯಲ್ಲಿ ಭಾಗವಹಿಸಿದ ಪಕ್ಷಗಳೂ ಸೇರಿವೆ) ಇಂತಹದೊಂದು ದೇಶವ್ಯಾಪಿ ಅಭಿಮಾನ ಭಾರತದ ರಾಜಕಾರಣವು ಯಾವುದೇ ಮತದ ಸಿದ್ಧಾಂತದ ಮೇಲೆ ಆಧರಿಸಲ್ಪಡಬೇಕೆಂದು ವಾದಿಸುವವರನ್ನು ದೂರ ಮಾಡುವುದೇ ಇದರ ಉದ್ದೇಶ. ಈ ಮೂಲಕ ನಾವು ನಮ್ಮ ಸ್ವಾತಂತ್ರ್ಯ ಚಳುವಳಿಯ ಸದ್ಭಾವನೆ ಮತ್ತು ಪರಂಪರೆಗಳನ್ನು ಮುಂದೆ ಕೊಂಡೊಯ್ಯುತ್ತೇವೆ.

ಸೂರಜ್‌ಕುಂಡ್ ಸಭೆಯಲ್ಲಿ ಪಾಲುಗೊಂಡ ವಿ.ಪಿ.ಸಿಂಗ್ ಮತ್ತು ಅವರ ಸಹೋದ್ಯೋಗಿಗಳೂ ಎಡಪಕ್ಷಗಳ ಈ ನಿಲುವನ್ನು ಬಹುಮಟ್ಟಿಗೆ ಒಪ್ಪುತ್ತಾರೆ. ಅಕ್ಟೋಬರ್ 2ರಂದು ಅವರು ಅಂಗೀಕರಿಸಿದ್ದ ನಿರ್ಣಯದಲ್ಲಿ ಕೋಮುವಾದವು ರಾಷ್ಟ್ರದ ಐಕ್ಯತೆಗೆ ತಂದೊಡ್ಡಿರುವ ಭೀಕರ ಅಪಾಯವನ್ನು ಅದರ ವಿರುದ್ಧ ಹೋರಾಟ ನಡೆಸಿ ಜಾತ್ಯಾತೀತ ಚಳುವಳಿಯನ್ನು ಬಲಪಡಿಸಬೇಕಾದುದರ ಅಗತ್ಯವನ್ನೂ ಒತ್ತಿ ಹೇಳಲಾಗಿದೆ. (ವಿ.ಪಿ.ಸಿಂಗ್ ಮತ್ತು ಅವರ ಸಹೋದ್ಯೋಗಿಗಳು ಅಕ್ಟೋಬರ್ 12ರ ದೆಹಲಿ ಸಮಾವೇಶದಲ್ಲೂ ಭಾಗವಹಿಸಿದ್ದಾರೆ–ಅನುವಾದಕ)

## ಬಿ.ಜೆ.ಪಿ. ಕಂಗಾಲಾಗಿದೆ !

ಇವೆಲ್ಲ ಸಹಜವಾಗಿಯೇ ಬಿ.ಜೆ.ಪಿ. ಮುಂದಾಳುಗಳನ್ನು ಕಕ್ಕಾಬಿಕ್ಕಿ ಮಾಡಿವೆ. 'ಕೋಮುವಾದವೆಂದರೆ ಅಷ್ಟೇನು ದೊಡ್ಡ ಸಂಗತಿಯಲ್ಲ ಮತ್ತು ಎಡಪಕ್ಷಗಳನ್ನು ರಾಷ್ಟ್ರೀಯ ರಾಜಕಾರಣದಿಂದ ದೂರ ತಳ್ಳಿಬಿಟ್ಟಿದ್ದೇವೆ ಎಂದೆಲ್ಲ ಅವರು ಜನಗಳನ್ನು ನಂಬಿಸುವುದಕ್ಕೆ ಎಷ್ಟೇ ಪ್ರಯತ್ನಿಸಿದರೂ ಜನ ತಮ್ಮನ್ನು ನಂಬುವುದಿಲ್ಲವೆನ್ನುವುದು ಅವರಿಗೆ ಗೊತ್ತಾಗಿದೆ. ಇತ್ತೀಚೆಗೆ ಬಿ.ಜೆ.ಪಿ ಅಧ್ಯಕ್ಷ ಅಡ್ವಾಣಿ ಅವರು ಬಿ.ಜೆ.ಪಿ. ಮತ್ತು ವಿ.ಪಿ. ಸಿಂಗ್ ನಡುವಿನ ಸಂಬಂಧದ ವಿವರಣೆ ನೀಡಲು ನಿರಾಕರಿಸಿದರಲ್ಲದೆ ರಾಜೀವ್ ಗಾಂಧಿ ಅವರ ಭ್ರಷ್ಟಾಚಾರದ ವಿರುದ್ಧ ನಡೆಯ ಬೇಕಾದ ಹೋರಾಟವನ್ನು ಎಡ ಪಕ್ಷಗಳು ಪೇಲವಗೊಳಿಸಲು ಪ್ರಯತ್ನಿಸಿವೆ ಎಂದೂ ಅವುಗಳ ಮೇಲೆ ಹರಿಹಾಯ್ದರು.

ಬಿ.ಜೆ.ಪಿ. ಮುಂದಾಳುಗಳ ದುರದೃಷ್ಟ,ಪಾಪ! ವಿ.ಪಿ.ಸಿಂಗ್ ಮತ್ತು ಅವರ ಸಹೋದ್ಯೋಗಿಗಳಾಗಲೀ, ಅಥವಾ ಎಡ ಪಕ್ಷಗಳಾಗಲೀ ರಾಜೀವ್ ಗಾಂಧಿಯವರ ಭ್ರಷ್ಟಾಚಾರ ಮತ್ತು ಬಿ.ಜೆ.ಪಿ.ಯನ್ನೂ ಒಳಗೊಂಡಂತೆ ಎಲ್ಲ ಬಣ್ಣದ ಕೋಮುವಾದಇವೆರಡೂ ಒಂದಕ್ಕೊಂದು ವಿರೋಧವಾಗಿದೆ. ಯೆಂದು ಭಾವಿಸಿಲ್ಲ. ಬದಲಾಗಿ ಇವೆರಡೂ ಒಂದಕ್ಕೊಂದು ಪೂರಕವಾಗಿದೆಯೆಂದು ತಿಳಿದಿದ್ದಾರೆ. ಕೋಮುವಾದಿ ಶಕ್ತಿಗಳ ಜೊತೆಗೆ ಸೇರಿಕೊಂಡು (ಬಿ.ಜೆ.ಪಿ. ಕನಸು ಕಾಣುವ ರೀತಿ) ರಾಜೀವ ಕಾಂಗ್ರೆಸ್‌ನ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ಮಾಡುವುದು ಸಾಧ್ಯವಿಲ್ಲ; ರಾಜೀವ ಸರಕಾರವನ್ನು ಕೆಳಗಿಳಿಸುವುದಕ್ಕೂ ಸಾಧ್ಯವಿಲ್ಲ. ಹಾಗೆಯೇ ರಾಜೀವಗಾಂಧಿ ಸರಕಾರದ ಕೈಗಳನ್ನು ಬಲಪಡಿಸಿ [ಕಾಂಗ್ರೆಸ್ ವಾಮ ಪಂಥೀಯರೆನಿಸಿಕೊಳ್ಳುವವರು ಬಯಸುವ ಹಾಗೆ] ಕೋಮುವಾದವನ್ನು ಸೋಲಿಸುವುದೂ ಅಷ್ಟೇ ಅಸಾಧ್ಯ.

ಬಿ. ಜೆ. ಪಿ. ಮುಂದಾಳುಗಳಿಗೆ ಇನ್ನೊಂದು ದೊಡ್ಡ ಆಘಾತ ಇಲ್ಲಿದೆ. ಅದನ್ನು ಕೊಟ್ಟವರು ಸ್ವತ: ಆರೆಸ್ಸೆಸ್ ಸರ ಸಂಘಚಾಲಕ ಬಾಳಾಸಾಹೇಬ್

(5ನೇ ಪುಟ ನೋಡಿ)

# ಭಾರತ – ಚೀನಾ ಸಂಬಂಧ ಕೆಲವು ಸಂದೇಹಗಳು

**ಪ್ರಶ್ನೆ**

ಭಾರತದ ವಿರುದ್ಧ ವಿದೇಶಿ ಶಕ್ತಿಗಳು ಕೈವಾಡ ನಡೆಸಿವೆ ಎಂದು ನಮ್ಮ ಪಕ್ಷ ಹೇಳಿದೆ. ಇದರಲ್ಲಿ ಚೀನಾದ ಪಾತ್ರವೇನು?

ಏಕೆಂದರೆ, ಭಾರತ-ಶ್ರಿಲಂಕಾ ಸಂಬಂಧಗಳು ಹದಗೆಡುತ್ತಿರುವಾಗಲೇ ಶ್ರೀಲಂಕಾದ ಸಂರಕ್ಷಣೆಯ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಚೀನೀ ತಂಡವು ಕೊಲೊಂಬೊಕ್ಕೆ ಭೇಟಿಕೊಡುತ್ತಿದೆ ಎಂದು ಇತ್ತೀಚೆಗೆ ಪತ್ರಿಕೆಗಳು ವರದಿಮಾಡಿವೆ. ಹಾಗೆಯೇ ಜಿ.ಎನ್.ಎಲ್.ಎಫ್. ಪ್ರತ್ಯೇಕವಾದಿಗಳ ಬಳಿ ಚೀನಾದ ಗುರುತಿರುವ ಶಸ್ತ್ರಾಸ್ತ್ರಗಳು ದೊರೆತಿವೆ ಎಂಬುದು, ಪಾಕಿಸ್ತಾನ – ಚೀನಾ ಸಂಬಂಧ, ಅರಣಾಚಲ ಪ್ರದೇಶ ಸಂಬಂಧದಲ್ಲಿ ವಿವಾದ. ಈ ಎಲ್ಲಾ ವಿಷಯಕ್ಕೆ ಸಂಬಂಧಿಸಿ ನೋಡಿದರೆ ಈ ಪ್ರಶ್ನೆ ಉದ್ಭವಿಸುತ್ತದೆ ಈ ಬಗ್ಗೆ ವಿಶದೀಕರಿಸಬೇಕೆಂದು ಕೋರುತ್ತೇನೆ.

ಕಲ್ಕತ್ತಾದ ಒಬ್ಬ ಸಂಗಾತಿ

ಭಾರತ–ಚೀನಾ ಸಂಬಂಧದ ಬಗ್ಗೆ ವಸ್ತುನಿಷ್ಠ ಸತ್ಯವಾದ ತಿಳುವಳಿಕೆಯನ್ನು ಪಡೆಯಬೇಕಾದರೆ ಎರಡೂ ಸಂಗತಿಗಳ ಬಗ್ಗೆ ಸ್ಪಷ್ಟ ದೃಷ್ಟಿಕೋನವಿರಬೇಕು.

ಒಂದನೆಯದು ಚೀನಾ ಹಾಗೂ ಭಾರತ ಇತಿಹಾಸದ ಕಾಲದಿಂದ ಅನ್ಯೋನ್ಯ ಸಂಬಂಧವುಳ್ಳ ಎರಡು ದೊಡ್ಡ ಏಷ್ಯಾ ಖಂಡದ ದೇಶಗಳು. ಜಗತ್ತಿನಲ್ಲಿ ಬಂಡವಾಳಶಾಹಿ ಬೆಳೆಯ ತೊಡಗಿದ್ದ ಸಮಯದಲ್ಲಿಯೇ ಎರಡೂ ದೇಶಗಳೂ ಈ ಬಂಡವಾಳಶಾಹಿ ದೇಶಗಳ ವಸಾಹತುಗಳಾದುವು. ತಮ್ಮ ತಮ್ಮ ದೇಶದ ಪರಿಸ್ಥಿತಿಗನುಗುಣವಾಗಿ ಈ ವಸಾಹತುಶಾಹಿಗಳಿಗೆ ವಿರುದ್ಧವಾಗಿ ಹೋರಾಟ ಮಾಡಿದುವು. ಈ ಹೋರಾಟದಲ್ಲುಂಟಾದ ಸಹಕಾರದಿಂದ ಇತಿಹಾಸ ಕಾಲದಿಂದ ಬೆಳೆದು ಬಂದ ಅನ್ಯೋನ್ಯ ಸಂಬಂಧ ಮತ್ತಷ್ಟು ಧೃಡಗೊಂಡಿತು.

ಎರಡನೆಯದು ಈ ಎರಡು ದೇಶಗಳೂ ಸರಿಸುಮಾರು ಏಕಕಾಲಕ್ಕೆ ಸ್ವಾತಂತ್ರ್ಯ ಪಡೆದರೂ ಕೂಡ ಇಂಡಿಯಾ ಬಂಡವಾಳಶಾಹಿ ಪಥವನ್ನು ಚೈನಾ ಸಮಾಜವಾದಿ ಪಥವನ್ನು ಸ್ವೀಕರಿಸಿತು. ಈ ಎರಡು ಸಾಮಾಜಿಕ ವ್ಯವಸ್ಥೆಗಳ ನಡುವೆ ಜಾಗತಿಕ ಮಟ್ಟದಲ್ಲಿ ನಡೆದ ಸಮರದ ಹಿನ್ನೆಲೆಯಲ್ಲಿ ಏಷ್ಯಾದ ಈ ಎರಡೂ ದೊಡ್ಡ ಶಕ್ತಿಗಳ ನಡುವೆಯೂ ಎರಡೂ ಕಡೆಯಲ್ಲಿಯೂ ಅಭಿಪ್ರಾಯ ವ್ಯತ್ಯಾಸವುಂಟಾಯಿತು.

ಇದರ ಫಲವೇ ಎರಡೂ ಸರ್ಕಾರಗಳ ನಡುವೆ ಗಡಿಗೆ ಸಂಬಂಧಿಸಿದ ಚರ್ಚೆಗಳು ಎದ್ದು ಬಂದದ್ದು. ಈ ದೇಶಗಳು ವಸಾಹತುಗಳಾಗುವುದಕ್ಕಿಂತ ಮೊದಲೇ ತಮ್ಮ ನಡುವೆ ಇದ್ದ ಸೌಹಾರ್ದ ಸಂಬಂಧಗಳ ಆಧಾರದ ಮೇಲೆ ಭಾರತ ಸರ್ಕಾರ ಸಮಾಧಾನಕರವಾದ ಚರ್ಚೆಗಾಗಿ ಪ್ರಯತ್ನಿಸಬೇಕಾಗಿತ್ತು. ಇದೇ ದಾರಿಯನ್ನೇ ಅಂದು ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲಿನ ಎಡ ಗುಂಪು ಅಂದರೆ ಇಂದಿನ ಸಿ.ಪಿ.ಐ. (ಎಂ) ಸೂಚಿಸಿತು. ಆದರೆ ಭಾರತದ ಬೂರ್ಷ್ವಾ ಆಳುವ ವರ್ಗ ಅದನ್ನು ಅಂಗೀಕರಿಸಲಿಲ್ಲ. ಅಮೇರಿಕದ ನೇತೃತ್ವದಲ್ಲಿರುವ ಸಾಮ್ರಾಜ್ಯವಾದಿಗಳ ಮತ್ತು ಸಮಾಜವಾದಿ ದೇಶಗಳ ನಾಯಕ ರಾಷ್ಟ್ರವಾದ ಸೋವಿಯೆತ್ ದೇಶದ ಸಹಾಯದಿಂದ ಸಮಾಜವಾದಿ ಚೀನಾವನ್ನು ಅಂತರರಾಷ್ಟ್ರೀಯ ರಾಜಕೀಯದಲ್ಲಿ ಮೂಲೆ ಗುಂಪು ಮಾಡಲು ಹಾಗೂ ಭಾರತದ ಜನರನ್ನು ದೇಶಪ್ರೇಮದ ಹೆಸರಿನಲ್ಲಿ ಹುಚ್ಚೆಬ್ಬಿಸಿ ಮಿಲಿಟರಿ ಉಪಯೋಗಿಸಿ, ಸೋಲಿಸಲು ಭಾರತದ ಬಂಡವಾಳಶಾಹಿ ಆಳುವ ವರ್ಗ ಪ್ರಯತ್ನಿಸಿತು.

ಚೀನಾ ವಿರೋಧಿ ಭಾವನೆಯ ಸಾಂಕ್ರಾಮಿಕ ರೋಗವನ್ನು ಹಬ್ಬಿಸಿ, ಭಾರತದ ಜನರನ್ನು ತಮ್ಮ ಹಿಂಬಾಲಕರನ್ನಾಗಿ ಮಾಡಿಕೊಳ್ಳಲು ಆಳುವ ವರ್ಗಗಳು ಪ್ರಯತ್ನಿಸಿದುವು. ಅಂದಿನ ಭಾರತದ ಕಮ್ಯುನಿಸ್ಟ್ ಪಕ್ಷದ ಒಂದು ದೊಡ್ಡ ವಿಭಾಗ–ಇಂದಿನ ಸಿ.ಪಿ.ಐ. ಕೂಡ ಈ ರೋಗವನ್ನು ಹಬ್ಬಿಸುವುದರಲ್ಲಿ ಪಾತ್ರವಹಿಸಿದೆ.

ಕಮ್ಯುನಿಸ್ಟ್ ಪಕ್ಷದ ಒಂದು ವಿಭಾಗದ ಬೆಂಬಲದೊಡನೆ ಭಾರತದ ಆಳುವ ವರ್ಗಗಳು ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ದೊಡ್ಡ ಬಿಕ್ಕಟ್ಟನ್ನು ಸೃಷ್ಟಿಸಿ ಅಂದು ಪ್ರಧಾನಿ ನೆಹರೂರವರು ದೇಶದೊಳಗೂ ಆಡಳಿತ ಪಕ್ಷದ ಒಳಗೂ ಒಂದು ಪ್ರಬಲ ವಿರೋಧವನ್ನು ಎದುರಿಸ ಬೇಕಾಯಿತು. ಸ್ವಾತಂತ್ರ ಭಾರತದ ರಾಜಕೀಯದಲ್ಲಿ ಇದಕ್ಕೆ ಮೊದಲೆಂದೂ ಇಷ್ಟು ದೊಡ್ಡ ಬಿಕ್ಕಟ್ಟು ಉಂಟಾಗಲಿಲ್ಲ. ಈ ಅನುಭವದಿಂದ ಪಾಠ ಕಲಿತು ನೆಹರೂವಿನ ನಂತರ ಪ್ರಧಾನಿಯಾದ ಇಂದಿರಾ ಗಾಂಧಿಯವರು ಚೀನಾ ವಿರೋಧಿ ಹುಚ್ಚನ್ನು ಕಡೆಗಣಿಸಲೇಬೇಕಾದ ಅನಿವಾರ್ಯತೆ ಉಂಟಾಯಿತು. ಆರಂಭದ ಘಟ್ಟದಲ್ಲಿ ಚೀನಾ ವಿರೋಧಿ ಭಾವನೆಯ ಅಲೆಯನ್ನು ಎಬ್ಬಿಸುವುದರಲ್ಲಿ ಜೊತೆಗೂಡಿದವರೂ ಸೇರಿ ಉಂಟಾದ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅವರೂ ಕೂಡ ಇದೇ ನೀತಿಯನ್ನು ಮುಂದುವರಿಸ ಬೇಕಾಯಿತು. ಅಂದಿನಿಂದ ಪ್ರಾರಂಭವಾಗಿ ಇಂದಿನವರೆಗೂ ಎರಡೂ ಸರಕಾರಗಳೂ ಪರಸ್ಪರ ಚರ್ಚೆಯನ್ನು ನಡೆಸಿಕೊಂಡು ಬರುತ್ತಾ ಇವೆ.

ಇದು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಎಡ ವಿಭಾಗವಾಗಿದ್ದ ಇಂದಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧೋರಣೆ ಸರಿಯೆಂಬುದನ್ನು ಸಾಬೀತು ಪಡಿಸಿದಂತಾಯಿತು.

ಅಂದರೆ ಅನ್ಯೋನ್ಯವಾದ ಮಾತುಕತೆಯಿಂದ ಪರಸ್ಪರ ಕೊಳುಕೊಡೆ ನಡೆಸಿ ಗಡಿ ಪ್ರಶ್ನೆಯೂ ಸೇರಿದಂತೆ ಎಲ್ಲಾ ವಿವಾದಗಳನ್ನೂ ಪರಿಹರಿಸಿಕೊಳ್ಳುವುದೇ ಭಾರತದ ಮುಂದಿರುವ ಏಕ ಮಾತ್ರ ಮಾರ್ಗ.

ಇಂದಿರಾ ಗಾಂಧಿ ಪ್ರಧಾನ ಮಂತ್ರಿ ಸ್ಥಾನಕ್ಕೆ ಬಂದ ತರುಣದಲ್ಲಿಯೇ ಆರಂಭವಾಗಿ ಇಂದಿನ ರಾಜೀವ ಗಾಂಧಿ ಸರಕಾರವೂ ಸೇರಿದಂತೆ ಎಲ್ಲಾ ಸರಕಾರಗಳೂ ಅನುಸರಿಸಿದ ಧೋರಣೆ ಇದೇ.

ಆದರೆ ಆಳುವ ವರ್ಗಗಳೂ ತಾತ್ವಿಕವಾಗಿ ಅಂಗೀಕರಿಸಿದ ಈ ಧೋರಣೆಯನ್ನು ಜಾರಿಗೆ ತರಲು ಪ್ರಯತ್ನಿಸುವಾಗ ಅದಕ್ಕೆ ಆತಂಕವೊಡ್ಡುವ ಅನೇಕ ಶಕ್ತಿಗಳೂ ಆಳುವ ವರ್ಗಗಳಲ್ಲಿವೆ. ಆಳುವ ಪಕ್ಷದೊಳಗೆ ಕೂಡ ಇವು ಪ್ರತಿಫಲಿಸಿವೆಯಾದ್ದರಿಂದ ಭಾರತ ಚೀನಾ ಮಾತುಕತೆಗಳಲ್ಲಿ ವಿಶೇಷವಾಗಿ ಗಡಿ ವಿವಾದಕ್ಕೆ ಪರಿಹಾರ ಪಡೆಯಲು ಅಡಿಯಾಗಿದೆ. ಪತ್ರಿಕೆಗಳು ಹಾಗೂ ಪ್ರಚಾರ ಮಾಧ್ಯಮಗಳಲ್ಲಿ ಹಳೇ ರೀತಿಯಲ್ಲಿ ಚೀನಾ ವಿರೋಧಿ ಭಾವನೆಯನ್ನು ಪ್ರಚಾರ ಮಾಡುತ್ತಲೇ ಇದ್ದಾರೆ. ಈ ಪ್ರಚಾರವೇ ಈ ಪ್ರಶ್ನೆಕಾರನಲ್ಲಿ ಸಂಶಯಗಳಿಗೆ ಕಾರಣವಾಗಿವೆ.

ನಮ್ಮ ದೇಶದ ಅಖಂಡತೆಗೆ ಅಪಾಯವೊಡ್ಡಿರುವ ವಿದೇಶಿ ಶಕ್ತಿಗಳಲ್ಲಿ ಚೈನಾದ ಪಾತ್ರದ ಕುರಿತು ಪ್ರಶ್ನೆಕಾರ ಕೇಳುತ್ತಿದ್ದಾನೆ ಅಲ್ಲವೇ? ಅದು ಎಷ್ಟರ ಮಟ್ಟಿಗೆ ಸರಿಯೆಂಬುದನ್ನು ನಾವು ಪರಿಶೀಲಿಸೋಣ.

ಭಾರತದೊಂದಿಗಿನ ಸಂಬಂಧಗಳೂ ಸೇರಿ ಹಲವಾರುವಿಷಯಗಳಲ್ಲಿ ಚೀನಾದ ರಾಜಕೀಯನಾಯಕರು ತಪ್ಪುನಿಲುವೆಯನ್ನು ತೆಗೆದುಕೊಂಡಿದ್ದಾರೆಂಬ ಅಭಿಪ್ರಾಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವ್ಯಕ್ತಪಡಿಸಿದೆ. ಆದರ ಜೊತೆಯಲ್ಲಿಯೇ ಇನ್ನೊಂದು ಸತ್ಯವೂ ಪಕ್ಷಕ್ಕೆ ಗೊತ್ತಿದೆ. ಭಾರತದ ಬಂಡವಾಳಶಾಹಿ ಸರ್ಕಾರ, ಬಂಡವಾಳಶಾಹಿ ವಿರೋಧ ಪಕ್ಷಗಳು ಹಾಗೂ ಪ್ರಚಾರ ಮಾಧ್ಯಮಗಳ ಬೆಂಬಲದೊಂದಿಗೆ ಅನುಸರಿಸುತ್ತಾ ಬಂದಿರುವ ಚೀನಾ ವಿರೋಧಿ ಭಾವನೆಯನ್ನು ಹಬ್ಬಿಸುವ ಧೋರಣೆಗೆ ಈ ಸಂಗತಿಯೇ ಪ್ರಧಾನ ಕಾರಣ. ಇದನ್ನೇ ನಾನು ಈ ಮೊದಲು ಸಂಕ್ಷಿಪ್ತವಾಗಿವಿವರಿಸಿದ್ದೇನೆ.

ಈ ಸತ್ಯವನ್ನು ಮರೆತು ಚೀನಾ ಆಕ್ರಮಣಕಾರಿ ಎಂಬ ವಿರೋಧಿಗಳ ಪ್ರಚಾರಕ್ಕೆ ತಾನೂ ಅಂಗೀಕಾರದ ಮುದ್ರೆಯೊತ್ತಿದ್ದನ್ನು ಈ ಹಿನ್ನಲೆಯಲ್ಲಿಯೇ ಬಂಡವಾಳಶಾಹಿ ಪ್ರಚಾರ ಮಾಧ್ಯಮಗಳ ವರದಿಯನ್ನು ಪ್ರಶ್ನೆಕಾರ ಅವು ಇದ್ದ ಹಾಗೆಯೇಅಂಗೀಕರಿಸಿದ್ದಾನೆ.

ಭಾರತ–ಚೀನಾ ಸಂಬಂಧ ಸ್ನೇಹಪರವಾಗಿಲ್ಲದಿದ್ದರೆ ಸ್ವತಂತ್ರ ಭಾರತವೇ ಆಗಲಿ ಸಮಾಜವಾದಿ ಚೈನಾವೇ ಆಗಲಿ ಮುಂದೆ ಹೋಗಲು ಸಾಧ್ಯವೇ ಇಲ್ಲ ಎಂಬುದು ರಾಜಕೀಯ ಸತ್ಯ.

ಇದನ್ನು ಮರೆತು ಭಾರತದ ಜನತೆಯನ್ನು, ಸೈನ್ಯವನ್ನು ಚೀನಾಕ್ಕಿದಿರಾಗಿ ನಿಲ್ಲಿಸುವ ತಂತ್ರ ಭಾರತದ ಬೂರ್ಷ್ವಾ ವರ್ಗ ಪ್ರಯೋಗಿಸಿ ನೋಡಿಯೂ ಆಯಿತು. ಸೋಲು ಅನುಭವಿಸಿಯೂ ಆಯಿತು. ಮುಂದಕ್ಕೆ ಕೂಡಾ ಈ ಪ್ರಶ್ನೆಯನ್ನು ಬಗೆಹರಿಸ ಬೇಕಾದರೆ ಸೌಹಾರ್ದದಿಂದ ಚರ್ಚೆಮಾಡಿ ಕೊಡುಕೊಳ್ಳುವ ನೀತಿಗೆ ತಯಾರಿದ್ದೇವೆಂದು ತೋರಿಸಬೇಕಾಗಿದೆ.

# ಪೌರ ಕಾರ್ಮಿಕರಿಗೆ ಪುಕ್ಕಟೆ ಮನೆ ಒದಗಿಸಿ

ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯಿಸ್ ಯೂನಿಯನ್ ಆಶ್ರಯದಲ್ಲಿ ಅಕ್ಟೋಬರ್ 18ರಂದು ವಸತಿ ಹೀನರ ಸಮಾವೇಶವೊಂದನ್ನು ಏರ್ಪಡಿಸಲಾಯಿತ್ತು. ಯೂನಿಯನ್ ಅಧ್ಯಕ್ಷ ಕಾ. ಎಂ.ಎನ್.ಉಗ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಪೌರ ಕಾರ್ಮಿಕರ ಒಕ್ಕೂಟದ ರಾಜ್ಯ ಅಧ್ಯಕ್ಷ ಕಾ. ಎನ್.ಕೆ. ಉಪಾಧ್ಯಾಯರು ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಸ್ವಾತಂತ್ರ್ಯ ದೊರೆತು 40 ವರ್ಷಗಳಾದರೂ ಬಹು ಸಂಖ್ಯಾತ ಕಾರ್ಮಿಕರ ಮತ್ತು ಬಡವರಿಗೆ ವಸತಿಯಿಲ್ಲದ ದಾರುಣಸ್ಥಿತಿ ಉಂಟಾಗಿದೆ ಎಂದು ಹೇಳಿದರು.

1987 ಅಂತರರಾಷ್ಟ್ರೀಯ ವಸತಿ ವರ್ಷವನ್ನಾಗಿ ಆಚರಿಸಬೇಕೆಂದು ವಿಶ್ವ ಸಂಯುಕ್ತ ರಾಷ್ಟ್ರ ಸಂಘ ಕರೆ ಕೊಟ್ಟಿದೆ. ಈ ಸಂದರ್ಭದಲ್ಲಿ ಮೈಸೂರಿನ ಸಾವಿರಕ್ಕೂ ಮೇಲ್ಪಟ್ಟ, ಕಾರ್ಪೊರೇಷನ್ ನೌಕರರಿಗೆ ವಸತಿ ಸೌಕರ್ಯವಿಲ್ಲದ ಕಾರಣ ಸರ್ಕಾರ ಹಾಗೂ ಕಾರ್ಪೊರೇಷನ್ ಕೂಡಲೇ ವಸತಿ ಒದಗಿಸಬೇಕೆಂದು ಒತ್ತಾಯಿಸಿದರು. ಪೌರ ಕಾರ್ಮಿಕರಿಗೆ ಪುಕ್ಕಟೆವಸತಿ ಒದಗಿಸಲು ಹಲವಾರು ಸಮಿತಿಗಳು ಶಿಫಾರಸ್ಸು ಮಾಡಿದ್ದರೂ ಅಧಿಕಾರಿಗಳು ಗಮನ ನೀಡದಿರುವುದನ್ನು ಖಂಡಿಸಿದರು. ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾನೂನು ಮಂತ್ರಿ ಲಕ್ಷ್ಮೀಸಾಗರ್, ನಗರಾಭಿವೃದ್ಧಿ ಮಂಡಳಿ ಅಧ್ಯಕ್ಷ ಡಿ. ಮಾದೇಗೌಡ, ಶಾಸಕ ವೇದಾಂತ ಹೆಮ್ಮಿಗೆ ಮತ್ತು ಮೇಯರ್‌ರವರುಗಳು ಪೌರ ಕಾರ್ಮಿಕರ ವಸತಿ ಸಮಸ್ಯೆ ಬಗೆ ಹರಿಸುವುದಾಗಿ ಆಶ್ವಾಸನೆ ನೀಡಿದರು. ಮೊದಲಿಗೆ ಯೂನಿಯನ್ ಪ್ರ. ಕಾರ್ಯದರ್ಶಿ ಕಾ. ಮೋಹನ್ ಕುಮಾರ್ ಸ್ವಾಗತಿಸಿ ಬೇಡಿಕೆಗಳ ಮನವಿ ಅರ್ಪಿಸಿದರು.

# ಡಿ. ವೈ. ಎಫ್. ಐ. ಜಿಲ್ಲಾ ಸಮಾವೇಶ

ಅಕ್ಟೋಬರ್ 4ರಂದು ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ. 3ನೇ ಸಮ್ಮೇಳನವನ್ನು ಕಾ||ವಿ.ಜೆ.ಕೆ.ನಾಯರ್ ರವರು ಉದ್ಘಾಟಿಸಿದರು. ಸ್ವಾಗತ ಸಮಿತಿ ಅಧ್ಯಕ್ಷ ಕಾ||ಹೆಚ್.ಎನ್.ನಾಗ ಮೋಹನ್ ದಾಸ್‌ರವರು ಮೊದಲಿಗೆ ಸ್ವಾಗತ ಕೋರಿದರು. ಕಾ||ವಿ.ಜೆ.ಕೆ. ಯವರು ಮಾತನಾಡುತ್ತಾ ಯುವ ಜನತೆ ವೈಜ್ಞಾನಿಕ ಮನೋಭಾವ ಬೆಳೆಸಿ ಕೊಳ್ಳಬೇಕು, ನಿರುದ್ಯೋಗಿ ಸಮಸ್ಯೆ ಯಾರೋ ಬಗ್ಗೆಹರಿಸುವರೆಂಬ ಮನೋಭಾವ ತೊರೆದು ಸಂಘಟಿತರಾಗಿ ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಲು ಹೋರಾಟ ನಡೆಸಬೇಕೆಂದು, ರಷ್ಯಾದೇಶದಲ್ಲಿ 1917ರಲ್ಲಿ ಕ್ರಾಂತಿಯಾದ ನಂತರ ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ಸೇರಿದಂತೆ ಭಾರತದಲ್ಲಿಯೂ ಇದು ಸಾಧ್ಯವಾಗಬೇಕಾದರೆ ಸಂಘಟನೆಯನ್ನು ಬಲಿಷ್ಠಗೊಳಿಸುವಂತೆ ಕರೆ

(6ನೇ ಪುಟ ನೋಡಿ)

[4ನೇ ಪುಟದಿಂದ]

ದೇವರಸ್ ಅವರೇ! ತನ್ನ ವಾರ್ಷಿಕ ವಿಜಯದಶಮಿ ಭಾಷಣದಲ್ಲಿ ದೇವರಸ್ "ನಾವು [ಆರೆಸ್ಸೆಸ್‌ನವರು] ಕಾಂಗ್ರೆಸ್ಸಿಗೆ ವಿರೋಧಿಗಳೆಂದು ಸಾಮಾನ್ಯವಾದ ನಂಬಿಕೆ. ಆದರೆ ಇದು ಸರಿಯಲ್ಲ ನಮ್ಮ ಸ್ಥಾಪಕರಾದ ಡಾ. ಹೆಡ್ಗೇವಾರ್ ಅವರೇ ಸ್ವತಃಹಿರಿಯಕಾಂಗ್ರೆಸಿಗರಾಗಿದ್ದರು. ಕಾಂಗ್ರೆಸ್‌ನವರುಅಲ್ಪಸಂಖ್ಯಾತರನ್ನು ಓಲೈಸಿಕೊಳ್ಳುವ ಧೋರಣೆಯನ್ನು ಅನುಸರಿಸಿದ ಕಾರಣ ಮಾತ್ರ ನಾವು ಅದನ್ನು ವಿರೋಧಿಸುತ್ತಿದ್ದೆವು" ಎಂದಿದ್ದಾರೆ. (ಹಿಂದುಸ್ತಾನ್ ಟೈಮ್ಸ್ 3.10.87) ಈ ವರದಿಯನ್ನು ಆರೆಸ್ಸೆಸ್‌ನವರು ಎಲ್ಲೂ ಅಲ್ಲಗಳೆದಿಲ್ಲ.

ಕಾಂಗ್ರೆಸ್‌ನ ಧೋರಣೆಅಲ್ಪಸಂಖ್ಯಾತರನ್ನು ಮಾತ್ರವೇ ಅಲ್ಲದೆ ಬಹುಸಂಖ್ಯಾತ ಕೋಮುವಾದಿಗಳನ್ನೂ ಓಲೈಸಿಕೊಳ್ಳುವ ಸಂದರ್ಭ ಸಾಧಕ ಧೋರಣೆಯೆನ್ನುವುದು ಕಣ್ಣಿದ್ದವರೆಲ್ಲರಿಗೂ ಕಾಣುವವಿಚಾರ. ಅಲ್ಪಸಂಖ್ಯಾತ ಕೋಮಿನವರನ್ನು ಮೆಚ್ಚಿಸಲು ರಾಜೀವಗಾಂಧಿ ಮುಸ್ಲಿಂ ಮಹಿಳಾ ವಿಧೇಯಕವನ್ನು ಸಂಸತ್ತಿನಲ್ಲಿ ಮಂಜೂರು ಮಾಡಿಸಿಕೊಳ್ಳುತ್ತಿದ್ದಾಗಲೇ ಕಾಂಗ್ರೆಸ್ ಪಕ್ಷವು ಹಿಂದೂ ಕೋಮುವಾದಿಗಳನ್ನು ತೃಪ್ತಿ ಪಡಿಸಲು ರಾಮಜನ್ಮಭೂಮಿ ಮತ್ತಿತರ ವಿಷಯದಲ್ಲಿ ಸಾಧ್ಯವಿದ್ದುದನ್ನೆಲ್ಲ ಮಾಡಿತು. ಕಾಂಗ್ರೆಸ್‌ಗೆ ಆರೆಸ್ಸೆಸ್ ಬೆಂಬಲ ಕೊಡಲು ಮುಂದಾಗಿದೆ ಎಂಬ ವರದಿ ಬಂದ ತಕ್ಷಣವೇ ಅವಸರವಸರವಾಗಿ ಅದನ್ನು ಸ್ವಾಗತಿಸಿದ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಚತುರ್ವೇದಿ ಅವರ ವರ್ತನೆ ನೋಡಿದರೆ ಆಡಳಿತ ಪಕ್ಷಕ್ಕೆ ಬಹುಸಂಖ್ಯಾತಅಥವಾ ಅಲ್ಪಸಂಖ್ಯಾತ ಕೋಮುವಾದಿಗಳಲ್ಲಿ ಯಾರದ್ದೇ ಬೆಂಬಲ ಸಿಕ್ಕಿದರೂ ಅದನ್ನು ಗಿಟ್ಟಿಸಿಕೊಳ್ಳುವುದರಲ್ಲಿ ಏನೇನೂ ಲಜ್ಜೆಯಿಲ್ಲವೆನ್ನುವುದು ಸ್ಪಷ್ಟ.

ಆದುದರಿಂದ ಕಾಂಗ್ರೆಸ್ಸಿನ ವಿರುದ್ಧ ರಾಜಿಯಿಲ್ಲದಹೋರಾಟವನ್ನು ಮುಂದುವರಿಸುವೆನೆಂಬ ಬಿ.ಜೆ.ಪಿ.ಯ ಬಡಾಯಿ ಕೇವಲ ಅರ್ಥವಿಲ್ಲದ ಬೊಗಳೆಯಾಗುಯೇ ಬಿ.ಜೆ.ಪಿ.ಯ ಕೋಮುವಾದವನ್ನು ವಿರೋಧಿಸಿ ತಾನು ಹೋರಾಡುತ್ತೇನೆನ್ನುವ ಕಾಂಗ್ರೆಸ್‌ನ ಮಾತೂ ಅಷ್ಟೇ ಅರ್ಥಹೀನ.

# ಕೇರಳ : 20 ಸಾವಿರ ಅಕ್ರಮ ಮದ್ಯದಂಗಡಿಗಳನ್ನು ಮುಚ್ಚಲು ನಿರ್ಧಾರ

ಸರ್ಕಾರದಿಂದ ಅನುಮತಿ ಪಡೆಯದೆ, ತೆರಿಗೆಯನ್ನು ನೀಡದೆ ರಾಜ್ಯಾದ್ಯಂತ ನಡೆಸಲಾಗುತ್ತಿರುವ ಸುಮಾರು 20 ಸಾವಿರ ಕಾನೂನು ಬಾಹಿರ ಮದ್ಯದ ಅಂಗಡಿಗಳನ್ನು ಮುಚ್ಚಲು ಕೇರಳದ ಸಿ.ಪಿ.ಐ.(ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವರಂಗದ ಸರ್ಕಾರ ನಿರ್ಧರಿಸಿದೆ. ಸರ್ಕಾರದ ಈ ಕ್ರಮಕ್ಕೆ ಆಡಳಿತ ರಂಗದ ಸಂಪೂರ್ಣ ಬೆಂಬಲ ಲಭಿಸಿದೆಯೆಂದು ರಂಗದ ಸಂಚಾಲಕರೂ, ಸಿ.ಪಿ.ಐ (ಎಂ) ಕೇಂದ್ರ ಸಮಿತಿ ಸದಸ್ಯರೂ ಆದ ಎಂ.ಎಂ.ಲಾರೆನ್ಸ್ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಮದ್ಯಪಾನ ನೀತಿಗೆ ಸಂಬಂಧಿಸಿ ನಡೆದ ವಿವಾದಗಳು ಅದನ್ನು ತಪ್ಪಾಗಿ ಅರ್ಥೈಸಿರುವುದರಿಂದ ಉಂಟಾದ ಪರಿಣಾಮಗಳು ಎಂಬುದಾಗಿ ರಂಗವು ಅಭಿಪ್ರಾಯಪಟ್ಟಿದೆ.

ಶಾಲೆಗಳು, ಮನೆಗಳಿರುವ ಪ್ರದೇಶಗಳಿಗೆ 400 ಮೀಟರ್ ಸುತ್ತಳತೆಯಲ್ಲಿ ಹೊಸ ಮದ್ಯದಂಗಡಿಗಳಿಗೆ ಅನುಮತಿ ನೀಡಲಾಗುವುದಿಲ್ಲವೆಂದು ಸರ್ಕಾರ ತಿಳಿಸಿದೆ.

ಸರ್ಕಾರದ ಈ ತೀರ್ಮಾನಕ್ಕೆದುರಾಗಿ ಕಾಂಗ್ರೆಸ್(ಐ) ಚಳುವಳಿ ನಡೆಸುವ ಬೆದರಿಕೆ ಹಾಕಿರುವುದನ್ನು ರಂಗವು ಪರಿಶೀಲಿಸಿತು.ತಪ್ಪು ಅಭಿಪ್ರಾಯದ ಆಧಾರದಲ್ಲಿ ಸರ್ಕಾರದ ಕ್ರಮದ ವಿರುದ್ಧ ಹೋರಾಟ ನಡೆಸುವವರು ನಿಜ ಸ್ಥಿತಿಯನ್ನು ಅರಿತುಕೊಂಡಾಗ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳುತ್ತಾರೆ. ಆದರೆ ಕೆಟ್ಟ ಉದ್ದೇಶದಿಂದಕೆಲವರು ನಡೆಸಲಿರುವ ಚಳುವಳಿ ಇಲ್ಲಿ ಯಶಸ್ವಿಯಾಗುವುದಿಲ್ಲ ಎಂಬುದಾಗಿ ಲಾರೆನ್ಸ್ ತಿಳಿಸಿದರು.

ಅಕ್ರಮವಾಗಿ ನಡೆಸಲ್ಪಡುತ್ತಿರುವ ಸಾವಿರ ಗಟ್ಟಲೆ ಮದ್ಯದಂಗಡಿಗಳನ್ನು ಯಾವುದೇ ರಿಯಾಯಿತಿ ತೋರಿಸದೆ ನಿರ್ದಾಕ್ಷಿಣ್ಯವಾಗಿಮುಚ್ಚಲಾಗುವುದು. ಈ ಅಂಗಡಿಗಳು ಮಾರ್ಚ್ 87 ರಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಹಲವು ವರ್ಷಗಳ ಮೊದಲಿನಿಂದಲೇಅಕ್ರಮವಾಗಿನಡೆಯುತ್ತಿದ್ದವು.ಇದಲ್ಲದೆ ಕಾಂಗ್ರೆಸ್(ಐ) ರಂಗದ ಆಡಳಿತ ಕಾಲದಲ್ಲಿ ಆರಂಭವಾಗಿ ಕ್ರಮಬದ್ಧವಾಗಿ ತೆರಿಗೆಯನ್ನು ಪಾವತಿ ಮಾಡುತ್ತಿರುವ 200ಕ್ಕೂ ಹೆಚ್ಚಿನ ಮದ್ಯಂದಗಡಿಗಳಿಗೆ ಲೈಸೆನ್ಸ್ ನೀಡಿ ಕಾನೂನುಬದ್ಧಗೊಳಿಸಲಾಗುತ್ತದೆ. ಇದಕ್ಕಾಗಿ ಕಾಯಿದೆಯಲ್ಲಿ ಕೆಲವು ಬದಲಾವಣೆಗಳನ್ನು ತರಲಾಗುತ್ತದೆ.

ಕೇರಳ ಸರ್ಕಾರದ ಈ ನೀತಿಯನ್ನು ಸಮಾಜದ ಎಲ್ಲಾ ಜನ ವಿಭಾಗಗಳೂ ಸ್ವಾಗತಿಸಿ ಬೆಂಬಲ ವ್ಯಕ್ತಪಡಿಸುವರೆಂದು ಲಾರೆನ್ಸ್ ನಂಬಿಕೆ ವ್ಯಕ್ತಪಡಿಸಿದ್ದಾರೆ. ○

## ಉಳ್ಳಾಲ ವಲಯ ಸಮ್ಮೇಳನ

ಮಂಗಳೂರಿನ ಡಿ.ವೈ.ಎಫ್.ಐ. ಸಮ್ಮೇಳನ ತಾಲ್ಲೋಕು ಕಾರ್ಯದರ್ಶಿ ಕಾ.ಶಿವಾನಂದಕೋಡಿಯವರ ಉದ್ಘಾಟನೆಯೊಂದಿಗೆ ಸೆ 20ರಂದು ಜರುಗಿತು ಜಿಲ್ಲಾ ಕಾರ್ಯದರ್ಶಿ ಕಾ.ನಾಗೇಶ್ ಕುಮಾರ್ ಮುಖ್ಯಅತಿಥಿಯಾಗಿದ್ದರು. ಕಾ.ರಮೇಶ್ಉಳ್ಳಾಲ ಮಂಡಿಸಿದ ವರದಿ ಅಂಗೀಕಾರವಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರ ಅವ್ಯವಸ್ಥೆ ಸರಿಪಡಿಸಬೇಕು, ಆಟದ ಮೈದಾನ, ಚೆಕ್‌ಪೋಸ್ಟ್‌ನಲ್ಲಿ ಲಾರಿ ನಿಲುಗಡೆಯಿಂದ ಸಂಚಾಲಕರ ಅಸ್ತವ್ಯಸ್ತ ತಡೆಗಟ್ಟಬೇಕು ಮುಂತಾದ ನಿರ್ಣಯ ಕೈಗೊಳ್ಳಲಾಯಿತು. ಸಕ್ರೀಯ ಕಾರ್ಯಕರ್ತ ಯು.ಬಿ.ಶಿವಪ್ಪನ್ ಅಕಾಲಿಕ ಮರಣಕ್ಕೆ ಸಂತಾಪಸೂಚಿಸಲಾಯಿತು ಜಪಾನ್‌ನಲ್ಲಿ ನಡೆಯುವ ಮಿ.ಏಷ್ಯಾ ಸ್ಪರ್ಧೆ ತೆರಳುವ ಕಾ. ಬಾಸ್ಕರತೊಕ್ಕೊಟು, ಭಾರತ್ ಕಿಶೋರ್, ಸ್ಪರ್ಧೆಯಲ್ಲಿ ಗ್ರೂಪ್‌ನ ಪ್ರಥಮ ಸ್ಥಾನ ಪಡೆದ ಕಾ.ಜಯಶೀಲರವರನ್ನು ಅಭಿನಂದಿಸಲಾಯಿತು. ನೂತನ ಸಮಿತಿಗೆ ಕಾ. ಯು. ಬಿ. ನಾರಾಯಣ(ಅಧ್ಯಕ್ಷ) ಕೆ.ಕೃಷ್ಣಪ್ಪ, ವಿಜಯ(ಉಪಾಧ್ಯಕ್ಷರು) ರಮೇಶ್‌ಉಳ್ಳಾಲ್ (ಕಾರ್ಯದರ್ಶಿ) ಅಶೋಕ್‌ಕುಮಾರ್, ಗಂಗಾಧರ್ [ಜೊತೆಕಾರ್ಯದರ್ಶಿ] ಬಾಸ್ಕರ್ [ಖಜಾಂಜಿ]ಯಾಗುಳ್ಳ 34 ಜನರ ಸಮಿತಿ ಆಯ್ಕೆಗೊಂಡಿತು. ●

## ಮುಳಬಾಗಲು ತಾಲ್ಲೋಕು ಘಟಕ ರಚನೆ

ಮುಳಬಾಗಲು ತಾಲ್ಲೋಕು ಡಿ ವೈ. ಎಫ್.ಐ. ಘಟಕವನ್ನು ಸೆ.30 ರಂದು ರಚಿಸಲಾಯಿತು. 65 ಮಂದಿ ಯುವ ಜನರು ಭಾಗವಹಿಸಿದ್ದ ಸಭೆಯ ಅಧ್ಯಕ್ಷತೆಯನ್ನು ವಕೀಲರಾದ ಕಾ.ನಾಗಮೋಹನದಾಸ್ ವಹಿಸಿದ್ದರು. ಡಿ ವೈ. ಎಫ್.ಐ. ಧ್ಯೇಯ, ಧೋರಣೆ ಕಾರ್ಯಕ್ರಮ ಕುರಿತು ಮಾತನಾಡಿದರು.

ದೇಶದ ಯುವ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಕಾ. ಗೋಪಾಲ್‌ಮಾತನಾಡಿದರು. ನೂತನ ಘಟಕಕ್ಕೆ ಕಾ.ನಾಗರಾಜ್ ಸಂಚಾಲಕರಾಗಿರುವ 20 ಜನರ ಸಂಘಟನಾ ಸಮಿತಿ ರಚಿಸಲಾಯಿತು. ಕೋಲಾರ ಜಿಲ್ಲಾ ಸಮ್ಮೇಳನಕ್ಕೆ 20 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ○

# ಡಿ. ವೈ. ಎಫ್. ಐ. ಚಟುವಟಿಕೆಗಳು

## 3ನೇ ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ

ಕರ್ನಾಟಕ ರಾಜ್ಯ ಡಿ.ವೈ.ಎಫ್.ಐ. 3ನೇ ಸಮ್ಮೇಳನ ಕೋಲಾರದಲ್ಲಿ ನವಂಬರ್ 4.5 ರಿಂದ6 ವರಗೆಜರುಗಲಿದ್ದು ಸಮ್ಮೇಳನಯಶಸ್ವಿಗೊಳಿಸಲು ಅಕ್ಟೋಬರ್ 11 ರಂದು ಶಿಡ್ಲಘಟ್ಟದಲ್ಲಿ ಸಭೆ ಸೇರಿ ಸುಮಾರು 200 ಸದಸ್ಯರ ಸ್ವಾಗತ ಸಮಿತಿರಚಿಸಲಾಗಿದೆ. ಸಮ್ಮೇಳನ ನಡೆಯುವ ಕೋಲಾರ ನಗರಕ್ಕೆ ಪಂಜಾಬ್ ಹುತಾತ್ಮ ಸಂಗಾತಿ "ಕಾ. ಗುರುನಾಮ್‌ಸಿಂಗ್ ಉಪ್ಪಲ್ ನಗರ" ಎಂದು ಹೆಸರಿಡಲಾಗಿದೆ.

ಶಾಸಕರಾದ ಕಾ.ಆರ್.ವೆಂಕಟರಾಮಯ್ಯ (ಅಧ್ಯಕ್ಷ) ಕಾ.ಜಿ.ವಿ.ಶ್ರೀರಾಮರೆಡ್ಡಿ(ಕಾರ್ಯದರ್ಶಿ) ಕಾ.ಕೆ.ಎಂ ವೆಂಕಟೇಶ್ ಖಜಾಂಚಿಯಾಗಿ, ಉಪಾಧ್ಯಕ್ಷ ಹಾಗೂಸಹಕಾರ್ಯದರ್ಶಿಗಳಾಗಿ ತಲಾ ಹತ್ತು ಮಂದಿಯಾಗಿರುವ ಸಮಿತಿ ರಚಿಸಲಾಗಿದೆ. ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಕಾ.ಶಿವರಾಂ, ವಕೀಲರಾದ ಕಾ.ನಾಗಮೋಹನ್ ದಾಸ್, ಅಶ್ವಥನಾರಾಯಣರೆಡ್ಡಿ, ಯವರುಗಳಲ್ಲದೆ ಜಿಲ್ಲೆಯ ಇತರ ಪ್ರಗತಿಪರ ಗಣ್ಯರನ್ನೊಳಗೊಂಡಿದೆ. ಎಸ್.ಎಫ್.ಐ, ಡಿ.ವೈ.ಎಫ್.ಐ. ಸಿ.ಐ.ಟಿ.ಯು, ಪ್ರಾಂತ ರೈತ ಸಂಘದ ಪ್ರಮುಖರು ಸಮಿತಿಯ ಸದಸ್ಯರಾಗಿರುತ್ತಾರೆ. ○

## ಬೆಂಗಳೂರು ಸಮಾವೇಶ

(5ನೇ ಪುಟದಿಂದ)

ನೀಡಿದರು. ನೂರಕ್ಕೂ ಮೇಲ್ಪಟ್ಟು ಭಾಗವಹಿಸಿದ್ದ ವೀಕ್ಷಕ ಪ್ರತಿನಿಧಿಗಳ ಸಮಾವೇಶಕ್ಕೆ ವಿವಿಧ ಸಾಮೂಹಿಕ ಸಂಘಟನೆಗಳ ನಾಯಕರು ಶುಭಕೋರಿ ಮಾತನಾಡಿದರು. ಯುವ ಜನತೆ ಗಣಕೀಕರಣಕುರಿತು ಕಾ.ರತ್ನಾಕರಶೆಣೈ, ಸಮಾಜ ಬದಲಾವಣೆಯಲ್ಲಿ ಯುವ ಜನರ ಪಾತ್ರದ ಕುರಿತು ಕಾ ಜಿ.ಎನ್. ನಾಗರಾಜ್, ಪ್ರಸ್ತುತ ರಾಜಕೀಯ ಪರಿಸ್ಥಿತಿ ಕುರಿತು ಕಾ.ಎಸ್.ಆರ್. ಆರಾಧ್ಯ ಮಾತನಾಡಿದರು. ನಿರುದ್ಯೋಗ ಸಮಸ್ಯೆ ರಾಜಕೀಯ ಪರಿಸ್ಥಿತಿ ಬೆಲೆಏರಿಕೆ, ದೆಹಲಿ ಚಲೋ ಯಶಸ್ವಿಗೊಳಿಸಲು, ಮದ್ರಾಸ್‌ನಲ್ಲಿನಡೆಯುವ ರಾಷ್ಟ್ರ ಸಮ್ಮೇಳನ ಯಶಸ್ವಿಗೊಳಿಸುವ ಸುಮಾರು 20 ನಿರ್ಣಯ ಕೈಗೊಳ್ಳಲಾಯಿತು. ಕೋಲಾರದಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ ಕಾ. ಶ್ರೀನಿವಾಸ್, ಶಿವಶಂಕರ್, ಗೋಪಾಲಕೃಷ್ಣ, ಎನ್.ಕೆ.ಮೂರ್ತಿ ಪ್ರತಿನಿಧಿಗಳಾಗಿ ಹಾಗೂ ಕಾ.ಸಂಜರಾಜ್, ಮಹದೇವಕುಮಾರ್, ನಾಗರಾಜ್, ವೆಂಕಟೇಶ್‌ರವರು ವೀಕ್ಷಕರಾಗಿಆಯ್ಕೆಕೊಂಡರು. ಕೊನೆಯಲ್ಲಿ ಕಾ ಶಿವರಾಂ ಸಮಾರೋಪ ಭಾಷಣ ಮಾಡಿದರು. ●

## ಕೋಲಾರ ಜಿಲ್ಲಾ ಸಮ್ಮೇಳನ

ಅಕ್ಟೋಬರ್ 11ರಂದು ಶಿಡ್ಲಘಟ್ಟದಲ್ಲಿ ಕೋಲಾರ ಜಿಲ್ಲಾ 2ನೇ ಡಿ.ವೈ. ಎಫ್.ಐ. ಸಮ್ಮೇಳನ ರಾಜ್ಯ ಕಾರ್ಯದರ್ಶಿ ಕಾ.ಎಸ್.ಶಿವರಾಂರವರ ಧ್ವಜಾರೋಹಣದೊಂದಿಗೆ ಪ್ರಾರಂಭಗೊಂಡಿತು. ಕೃಷಿ ಕೂಲಿಗಾರರ ಸಂಘದ ಸಂಚಾಲಕ ಕಾ.ಜಿ.ವಿ.ಶ್ರೀರಾಮರೆಡ್ಡಿಯವರು ಉದ್ಘಾಟಿಸಿದರು. ವಕೀಲರ ಸಂಘದ ಮುಖಂಡ ಕಾ.ನಾಗಮೋಹನದಾಸ್ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಜಿಲ್ಲಾ ಸಮಿತಿ ಪರವಾಗಿ ಕಾ.ಎ.ಪಿ. ಆಂಜನೇಯರೆಡ್ಡಿ ಮಂಡಿಸಿದ ವರದಿ ಮೇಲೆ ಚರ್ಚೆ ನಡೆಯಿತು. ಎಸ್.ಎಫ್.ಐ.ನ ಕಾ.ಬೈಯ್ಯಾರೆಡ್ಡಿ, ರೈತ ಸಂಘದ ಕಾ.ಕೆ.ಎಂ.ವೆಂಕಟೇಶ್, ಅಶ್ವಥ್‌ನಾರಾಯಣರೆಡ್ಡಿ, ಶುಭಕೋರಿ ಮಾತನಾಡಿದರು.

ವಿಶ್ವಶಾಂತಿರಾಷ್ಟ್ರೀಯ ಸಮಗ್ರತೆ, ವಿಜಯನಗರ ಉಕ್ಕಿನ ಕಾರ್ಖಾನೆ, ನಿರುದ್ಯೋಗ, ಅನಕ್ಷರತೆ, ಕೋಲಾರ ಜಿಲ್ಲಾ ಅಭಿವೃದ್ಧಿ ಬಗ್ಗೆ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. 150 ಪ್ರತಿನಿಧಿಗಳುಭಾಗವಹಿಸಿದ್ದರು. ನೂತನ ಜಿಲ್ಲಾ ಸಮಿತಿಗೆ ಕಾ.ಶ್ರೀನಿವಾಸ್[ಅಧ್ಯಕ್ಷ] ಕಾ.ಎ.ಪಿ.ಆಂಜನೇಯರೆಡ್ಡಿ(ಉಪಾಧ್ಯಕ್ಷರು) ಕಾ.ಎಂ ಎಸ್. ಆನಂದ್(ಕಾರ್ಯದರ್ಶಿ) ಖಜಾಂಚಿಯಾಗಿ ಕಾ.ಕೃಷ್ಣಾರೆಡ್ಡಿಯವರನ್ನೊಳಗೊಂಡು16 ಜನರಜಿಲ್ಲಾ ಸಮಿತಿ ಆಯ್ಕೆಗೊಂಡಿತು. ಕಾ.ಎಸ್. ಶಿವರಾಂ ಸಮಾರೋಪ ಭಾಷಣ ಮಾಡಿದರು. ○

## ಅ. 20 ರಂದು ರ್‍ಯಾಲಿ

ಬಿಜಾಪುರ ನಗರದಲ್ಲಿ ಅಕ್ಟೋಬರ್ 1ರಂದು ಸಿಂದಗಿ ತಾಲೋಕಿನ ಮೊರಟಗಿಯಲ್ಲಿ 2 ರಂದು ಜಮಖಂಡಿ ತಾಲ್ಲೋಕಿನ ಬನಹಟ್ಟಿಯಲ್ಲಿ 3 ರಂದು ಡಿ.ವೈ.ಎಫ್.ಐ. ಸಭೆ ಜರುಗಿತು. ರಾಜ್ಯ ಕಾರ್ಯದರ್ಶಿ ಕಾ.ಶಿವರಾಂ ಈ ಸಭೆಗಳಲ್ಲಿ ಮಾತನಾಡಿ ಮದ್ರಾಸ್‌ನಲ್ಲಿ ಡಿಸಂಬರ್‌ನಲ್ಲಿ ನಡೆಯುವ ರಾಷ್ಟ್ರ ಸಮ್ಮೇಳನ, ಕೋಲಾರದ ರಾಜ್ಯ ಸಮ್ಮೇಳನ ಹಾಗೂ ಜಿಲ್ಲಾ ಸಮ್ಮೇಳನ ಕುರಿತು ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದಕಾ.ಭೀಮಸಿಕಲಾದಗಿಡಿ.ವೈ.ಎಫ್ ಐ. ಜಿಲ್ಲಾ ಕಾರ್ಯದರ್ಶಿ ಕಾ.ಸದಾನಂದಮೋಧಿ, ಅಧ್ಯಕ್ಷ ಅಣ್ಣಾರಾಯ ಈಳಗೇರ, ಮಾನ್ಯಾಸಾಬಕಲಾದಗಿ, ನಧಾಪ್, ಶಿವಶರಣಸಿಂಗಾಡಿ, ಗೋಂದಕರ್, ಮರುಗೇಶ್‌ದುಂಡಪ್ಪರಾವ್ ಮಾತನಾಡಿದರು. ಅ. 20 ರಂದು ಜಿಲ್ಲಾ ಮಟ್ಟದಲ್ಲಿ ಯುವ ಜನರ ಸಮಸ್ಯೆಗೆ ಬೃಹತ್ ರ್‍ಯಾಲಿ ಸಂಘಟಿಸಲು ತೀರ್ಮಾನಿಸಲಾಯಿತು. ●

## ಕೋಮು ಸೌಹಾರ್ದತಾ ಸೈಕಲ್ ಜಾಥಾ

ರಾಯಚೂರು ನಗರದಲ್ಲಿ ಇತ್ತೀಚೆಗೆ 'ರಾಷ್ಟ್ರೀಯ ಐಕ್ಯತಾ ಸಮಿತಿ' ಆಶ್ರಯದಲ್ಲಿ ಕೋಮು ಸೌಹಾರ್ದತೆ ರಾಷ್ಟ್ರೀಯ ಐಕ್ಯತೆ ಕಾಪಾಡಲು ಸೈಕಲ್ ಜಾಥಾವನ್ನು ಏರ್ಪಡಿಸಲಾಗಿತ್ತು.

ಪೊಲೀಸ್ ಕಾಲೋನಿಯಿಂದ ಹೊರಟ ಯುವಜನರ ಸೈಕಲ್ ಜಾಥವನ್ನು ಕಾ. ಶ್ರಿಮತಿ ಹರಿಣಿಕಕ್ಕೇರಿಯವರು ಉದ್ಘಾಟಿಸಿ ಕಾ. ಎಂ.ಡಿ. ಖಲೀಲ್ ಅಧ್ಯಕ್ಷತೆ ವಹಿಸಿದ್ದರು. 25ಕಿಮೀ ಪ್ರಮಾಣಮಾಡಿದಜಾಥಾ ರಾಷ್ಟ್ರಧ್ವಜ ಹಾಗೂ ಶಾಂತಿ ಸಂಕೇತವಾದ ಬಿಳಿ ಪಾರಿವಾಳ ಹೊಂದಿರುವ ಧ್ವಜ ಹೊತ್ತು ಸಾಗಿತ್ತು. ದೇಶದ ಯುವ ಜನತೆಯ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಕ್ಕಾಗಿ ಹೋರಾಡಲು ಐಕ್ಯತೆಯಿಂದ ದುಡಿಯಬೇಕೆಂದು ಹಾಗೂ ವಿಚ್ಛಿದ್ರಕಾರಿ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ದ ರಾಷ್ಟ್ರೀಯ ಐಕ್ಯತೆ ಕಾಪಾಡಲು ಕರೆ ನೀಡಿದರು.

ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ. ರಾಘವೇಂದ್ರ ಕುಷ್ಟಗಿ ಮಾತನಾಡಿ ಚಾರಿತ್ರಿಕವಾಗಿ ಕೋಮುವಾದ ಹುಟ್ಟುಹಾಕಿದ ಹಿನ್ನಲೆಗಳನ್ನು ವಿವರಿಸಿದರು. ಕಾ. ಪುರುಷೋತ್ತಮ ಕಲಾಲ ಬಂಡಿ ಉದ್ಘಾಟಿಸಿ ಕಾ. ತಾಯಣ್ಣಾ ಎರಗೇರಾ ಅಧ್ಯಕ್ಷತೆ ವಹಿಸಿದ್ದರು. ವಕ್ಫ ಕಮಿಟಿ ಛೇರ್ ಮನ್ ಸಿ.ಎಂ. ಮತಾಲು ಸಿನಿಯರ ಅವರು ಅಥಿತಿಗಳಾಗಿ ಮಾತನಾಡಿದರು. ಕಾ. ಗೋವಿಂದರದ್ದಗಿರಿದಾಸ ಸ್ವಾಗತಿಸಿ ಕಾ. ಶಿವಮೂರ್ತಿ ಸ್ವಾಮಿ ವಂದಿಸಿದರು. ○

## ಕೈಗಾರಿಕಾ ಕಾರ್ಮಿಕರ ಸಮಾವೇಶ

[7ನೇ ಪುಟದಿಂದ]

ಗಳು ಆಂಧ್ರಪ್ರದೇಶಕ್ಕೆ ಸೇರಿದವು. ಒಟ್ಟು ರೋಗಗ್ರಸ್ತಕಾರ್ಖಾನೆಗಳಪೈಕಿ ಪ್ರತಿ ಶೇ.0.5 ಮಾತ್ರ ದೊಡ್ಡ ಕೈಗಾರಿಕೆಗಳಾಗಿದ್ದು ಉಳಿದ 1,28,687 ಕೈಗಾರಿಕೆಗಳು ಸಣ್ಣ ಪ್ರಮಾಣವುಗಳಾಗಿವೆ.

ಕಾರ್ಖಾನೆಗಳ ಮುಚ್ಚುವಿಕೆಮತ್ತು ಲಾಕ್‌ಔಟ್‌ಗಳನ್ನು ನಿಷೇಧಿಸಬೇಕೆಂದು ಮುಚ್ಚುವುದು ಅನಿವಾರ್ಯವೆಂದು ಕಂಡುಬಂದಲ್ಲಿ ಸರ್ಕಾರವೇ ಅದನ್ನು ವಹಿಸಿಕೊಳ್ಳಬೇಕೆಂದು ಸಮಾವೇಶದಲ್ಲಿ ನಿರ್ಣಯವನ್ನು ಸ್ವೀಕರಿಸಲಾಯಿತು. ಈ ಗೊತ್ತುವಳಿಯ ಮೇಲೆ ಮುಚ್ಚಿರುವ ಮತ್ತು ಬೀಗಮುದ್ರೆಗೊಳಗಾಗಿರುವ ಕಾರ್ಖಾನೆಗಳ 17 ಪ್ರತಿನಿಧಿಗಳು ಮಾತನಾಡಿದರು.

ಮೇಲ್ಕಂಡ ಗೊತ್ತುವಳಿಯನ್ನು ಒತ್ತಾಯಿಸಿ ಸ್ಥಳೀಯ ಸಮಾವೇಶಗಳನ್ನು ನಡೆಸಬೇಕೆಂದೂ ಮತ್ತು ಅಕ್ಟೋಬರ್ 28ರಂದು ಕಾರ್ಮಿಕಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಬೇಕೆಂದು ಸಮಾವೇಶವು ಕರೆ ಕೊಟ್ಟಿದೆ.

## ಪಂಜಿನ ರ್‍ಯಾಲಿ

ಸೆಪ್ಟೆಂಬರ್ 23 ರಂದು ದೆಹಲಿಯಲ್ಲಿ ನಡೆದ 'ದೆಹಲಿ ಚಲೋ' ಲಕ್ಷ ಜನರ ಚಾರಿತ್ರಿಕ ರ್‍ಯಾಲಿಯ ಅಂಗವಾಗಿ ಡಿ. ವೈ. ಎಫ್. ಐ. ವಿರಾಜಪೇಟೆ ತಾಲ್ಲೋಕು ಸಮಿತಿ ನೇತೃತ್ವದಲ್ಲಿ ಗೋಣಿ ಕೊಪ್ಪದಲ್ಲಿ ರಾತ್ರಿ ಸೆ.23 ರಂದು ಭಾರಿ ಮಳೆಯನ್ನು ಲೆಕ್ಕಿಸದೇ ತಾಲ್ಲೋಕಿನ ವಿವಿಧ ಭಾಗಗಳಿಂದ ಬಂದ 300 ಯುವ ಜನರ ವಿದ್ಯಾರ್ಥಿಗಳು ಪಂಜಿನ ಮೆರವಣಿಗೆ ನಡೆಸಿದರು.

# ಕಾಮನ್ವೆಲ್ತ್ — ಮತ್ತೆ ಥ್ಯಾಚರ್ ಹಠಮಾರಿತನ

ಕೆನಡಾದ ವಾಂಕುವರ್‌ನಲ್ಲಿ ಸಭೆ ಸೇರಿದ್ದ ಕಾಮನ್ವೆಲ್ತ್ ದೇಶಗಳ ಸರ್ಕಾರಗಳ ಮುಖ್ಯಸ್ಥರು ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ತಮ್ಮ ಖಂಡನೆಯನ್ನು ಹಾಗೂ ಆರ್ಥಿಕ ದಿಗ್ಬಂಧನಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿ, ದಕ್ಷಿಣ ಆಫ್ರಿಕವನ್ನು ಸಂಧಾನದ ಮಾರ್ಗಕ್ಕೆ ತರುವ ಯೋಜನೆಯೊಂದನ್ನು ರೂಪಿಸಿ ಕೊಂಡಿದ್ದಾರೆ. ಆದರೆ ಇವುಗಳಲ್ಲಿ ಯಾವುದಕ್ಕೂ ದಕ್ಷಿಣ ಆಫ್ರಿಕಾದ ಪ್ರಮುಖ ವಾಣಿಜ್ಯ ಪಾಲುದಾರ ದೇಶವಾದ ಮತ್ತು ಕಾಮನ್ವೆಲ್ತ್‌ನ ಕೇಂದ್ರವಾದ ಬ್ರಿಟನ್ ಒಪ್ಪುವಂತೆ ಮಾಡುವಲ್ಲಿ ಅವರು ಮತ್ತೊಮ್ಮೆ ಸಂಪೂರ್ಣವಾಗಿ ಸೋತಿದ್ದಾರೆ.

ದಕ್ಷಿಣ ಆಫ್ರಿಕಾದ ವಿರುದ್ಧ ಕಾರ್ಯಯೋಜನೆಯ ಮೇಲ್ವಿಚಾರಣೆಗೆಂದು ನೇಮಿಸಿದ ಎಂಟು ಸದಸ್ಯರುಳ್ಳ ವಿದೇಶಾಂಗ ಮಂತ್ರಿಗಳ ಸಮಿತಿಯಿಂದಲೂ ಬ್ರಿಟನ್ ದೂರವುಳಿದಿದೆ. ಎರಡು ವರ್ಷಗಳ ಹಿಂದೆ ನಸಾವೂನಲ್ಲಿ ನಡೆದ ಇಂತಹ ಸಭೆಯಲ್ಲೂ ನಂತರ ಲಂಡನ್‌ನಲ್ಲಿ ನಡೆದ ಕಾಮನ್ವೆಲ್ತ್ ಶೃಂಗ ಸಭೆಯಲ್ಲೂ ಬ್ರಿಟನ್ ತನ್ನ ವಿಕೃತ ವಾದವೊಡ್ಡಿ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಗೆ ಪರೋಕ್ಷ ಬೆಂಬಲ ನೀಡಿತ್ತು.

ಆರ್ಥಿಕ ದಿಗ್ಬಂಧನದಿಂದ ದಕ್ಷಿಣ ಆಫ್ರಿಕಾದ ಕರಿಯರಿಗೇ ಹೆಚ್ಚು ತೊಂದರೆಯೆಂಬ ತಮ್ಮ ವಿಲಕ್ಷಣವಾದವನ್ನು ಇತರ ಕಾಮನ್ವೆಲ್ತ್ ಮುಖಂಡರೂ ಈ ಬಾರಿ ಒಪ್ಪಿಕೊಂಡಂತಾಗಿದೆ ಎಂದು ಥ್ಯಾಚರ್ ಅವರು ಹೇಳಿಕೊಂಡಿದ್ದಾರಂತೆ.

"ಆ ಕಬ್ಬಿಣದ ಮಹಿಳೆ ಎಲ್ಲವನ್ನೂ ತಪ್ಪಾಗಿಯೇ ಕಾಣುತ್ತಾರೆ-ಬಹುಶಃ ಉದ್ದೇಶ ಪೂರ್ವಕವಾಗಿಯೇ ಇರಬೇಕು. ಬ್ರಿಟನ್‌ನಲ್ಲಿ ಆಕೆ ಮತಗಳನ್ನು ಪಡೆಯುವ ವಿಧಾನವೇ ಅದು. ಆದರೆ ಇತರ ಕಾಮನ್ವೆಲ್ತ್ ವಿಭಾಗದಿಂದ ಆಕೆ ಆ ರೀತಿ ಮತ ಪಡೆಯಲು ಸಾಧ್ಯವಿಲ್ಲ" ಎಂದು ಜಿಂಬಾಬ್ವೆ ಅಧ್ಯಕ್ಷ ಮುಗಾಬೆ ಥ್ಯಾಚರ್‌ರ ಹಠಮಾರಿತನವನ್ನು ತೀವ್ರವಾಗಿ ಖಂಡಿಸಿದ್ದಾರೆ.

# ಅಮೇರಿಕಾದ ಸಂವಿಧಾನಕ್ಕೆ ಇನ್ನೂರು ವರ್ಷ

1787ರ ಸೆಪ್ಟೆಂಬರ್ 17ರಂದು ಅಮೇರಿಕಾ ದೇಶದ ಸಂವಿಧಾನ ಜನ್ಮತಾಳಿತು. ಅಮೇರಿಕನ್ನರು ಕಳೆದ ತಿಂಗಳು ತಮ್ಮ ಸಂವಿಧಾನದ ಎರಡನೇ ಶತಮಾನೋತ್ಸವ ಆಚರಿಸಿದರು. ಈ ಆಚರಣೆಯ ಕಾಲದಲ್ಲಿ ಸತತವಾಗಿ ಕೇಳಿ ಬಂದ ಒಂದು ಹೆಗ್ಗಳಿಕೆಯೆಂದರೆ ಅಮೇರಿಕಾದ ಸಂವಿಧಾನದ ನೀತಿಗಳನ್ನು ಸಕಲ ಮಾನವ ಕುಲಕ್ಕಾಗಿ ನಿರೂಪಿಸಲಾಗಿದೆ, ಈಗಲೂ ಅದರ ನೀತಿಗಳು ಮುಕ್ತ ಸಮಾಜದ ಪ್ರಮುಖ ಮೌಲ್ಯಗಳನ್ನು ಪ್ರತಿಫಲಿಸುತ್ತವೆ.......ಇತ್ಯಾದಿ.

ಇದು ಎಷ್ಟರ ಮಟ್ಟಿಗೆ ಸತ್ಯ ? ಒಬ್ಬ ಅಂತರರಾಷ್ಟ್ರೀಯ ಕಾನೂನು ತಜ್ಞರು ವಿವಿಧ ದೇಶಗಳ ಸಂವಿಧಾನಗಳನ್ನು ಹೋಲಿಸಿದಾಗ ಎಲ್ಲಾ ಸಂವಿಧಾನಗಳಲ್ಲೂ ಅಂತರ ರಾಷ್ಟ್ರೀಯ ಕಾನೂನುಗಳು ಹಾಗೂ ಜಾಗತಿಕ ಸಮುದಾಯದ ಬದ್ಧತೆ ಕಂಡು ಬಂತು. ಇದಕ್ಕೊಂದು ಪ್ರಮುಖ ಅಪವಾದವೆಂದರೆ ಅಮೇರಿಕನ್ ಸಂವಿಧಾನ.

ದ್ವಿತೀಯ ಮಹಾ ಯುದ್ಧದ ನಂತರ ಹೆಚ್ಚಿನ ದೇಶಗಳು ಶಾಂತಿ ಹಾಗೂ ಸಹ ಬಾಳ್ವೆಯ ನೀತಿಯನ್ನು ತಮ್ಮ ಸಂವಿಧಾನದ ಮೂಲ ಭೂತ ಅಂಶವನ್ನಾಗಿ ಮಾಡಿವೆ. ಉದಾ : ಇಟಲಿಯ 1947ರ ಸಂವಿಧಾನ ಯುದ್ಧ ಅಂತರಾಷ್ಟ್ರೀಯ ತಿಕ್ಕಾಟಗಳನ್ನು ನಿವಾರಿಸುವ ಸಾಧನವಾಗಲಾರದು ಎಂದು ಹೇಳಿ ತಿರಸ್ಕರಿಸಿದೆ. ಪಶ್ಚಿಮ ಜರ್ಮನಿಯಲ್ಲೂ ಆಕ್ರಮಣದ ತಯಾರಿ ಸಂವಿಧಾನ-ವಿರೋಧಿ ಎಂದು ವಿಧಿಸಲಾಗಿದೆ. ಆದರೆ ಅಮೇರಿಕಾದ ಸಂವಿಧಾನ ಯುದ್ಧ ಘೋಷಿಸುವ ಹಕ್ಕನ್ನು ತನ್ನ ಕಾಂಗ್ರೆಸ್‌ಗೆ ನೀಡಿದೆ. ಇನ್ನೂರು ವರ್ಷಗಳ ಹಿಂದಿನ ಪರಿಸ್ಥಿತಿಗೆ ಅನುಗುಣವಾಗಿದ್ದ ಈ ಅಂಶವನ್ನು ತಿದ್ದುಪಡಿ ಮಾಡುವ ಅಗತ್ಯ ಅವರಿಗೆ ಇಂದು ಕೂಡಾ ಕಂಡು ಬರುತ್ತಿಲ್ಲ. ಕಳೆದ ಇನ್ನೂರು ವರ್ಷಗಳಲ್ಲಿ ಈ ಸಂವಿಧಾನ 20 ತಿದ್ದುಪಡಿಗಳನ್ನು ಕಂಡಿದೆ. ಆದರೆ ಜಾಗತಿಕ ಸಮುದಾಯಕ್ಕೆ ಇವು ಯಾವುದೂ ಸಂಬಂಧ ಪಟ್ಟದ್ದಲ್ಲ.

ತಮ್ಮ ಸಂವಿಧಾನದ ಬಗ್ಗೆ ಇಬ್ಬರು ಅಮೇರಿಕನ್ನರ ಅಭಿಪ್ರಾಯ ನೋಡಿ. ಒಬ್ಬ ಹೇಳಿದ "ಈ ದೇಶದಲ್ಲಿ ನಾನು ಸರ್ಕಾರೀ ವ್ಯವಸ್ಥೆಯ ಬಗ್ಗೆ ಮಾತ್ರವಲ್ಲ, ಅಧ್ಯಕ್ಷರ ಬಗ್ಗೆಯೂ ಎಲ್ಲಾ ಮಾಹಿತಿ ಪಡೆಯಬಲ್ಲೆ. ಅದರಲ್ಲಿ ನಾನು ಕೆಲವನ್ನು ಒಪ್ಪದಿದ್ದರೂ ನನಗೆ ಬೇಸರವಿಲ್ಲ. ಯಾಕೆಂದರೆ ನಾನು ಯಾರನ್ನು ಬೇಕಾದರೂ ಟೀಕಿಸಲು ನನಗೆ ಅವಕಾಶವಿದೆ"

ಇನ್ನೊಬ್ಬ ಹೇಳಿದ-"ನಾನು ಕಳೆದ ನಲ್ವತ್ತು ವರ್ಷಗಳಿಂದ ನಮ್ಮ ಸರ್ಕಾರವನ್ನು ಟೀಕಿಸುತ್ತಾ ಬಂದಿದ್ದೇನೆ. ಆದರೆ ಏನೂ ಬದಲಾಗಲಿಲ್ಲ" ಇವರಿಬ್ಬರ ಅಭಿಪ್ರಾಯವೂ ಸರಿಯೇ. ಅವರಿಬ್ಬರೂ ಪ್ರಜಾಪ್ರಭುತ್ವವನ್ನು ಬೇರೆ ಬೇರೆ ಕೋನಗಳಿಂದ ನೋಡುತ್ತಿದ್ದಾರಷ್ಟೆ. ಒಬ್ಬನಿಗೆ ಪ್ರತಿಕ್ರಿಯೆ ನೋಡಿಯೇ ತೃಪ್ತಿ. ಇನ್ನೊಬ್ಬನಿಗೆ ಫಲಿತಾಂಶವೇನೆಂಬುದು ಮುಖ್ಯ.

## ಸಂಕ್ಷಿಪ್ತ ಸುದ್ದಿ

### ★ ಅಮೇರಿಕಾಕ್ಕೆ ಸ್ಟಿಂಗರ್ ತಿರುಗುಬಾಣ

ಅಫಘಾನ್ ಕ್ರಾಂತಿಯ ವಿರುದ್ಧ ಪ್ರತಿಗಾಮೀ ದುಷ್ಮನ್‌ಗಳಿಗೆ ನೀಡಲೆಂದು ಅಮೇರಿಕಾ ಸ್ಟಿಂಗರ್ ಕ್ಷಿಪಣಿಗಳನ್ನು ಅಗಾಧ ಸಂಖ್ಯೆಯಲ್ಲಿ ಒದಗಿಸಿತ್ತು. ಹೆಗಲಿಂದ ತೂಗುಹಾಕಿ ಬಳಸಬಲ್ಲ ಈ ಶಕ್ತಿಶಾಲೀ ಕ್ಷಿಪಣಿ ವಿಮಾನಗಳನ್ನು ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ. ಇತ್ತೀಚೆಗೆ ಈ ಕ್ಷಿಪಣಿಗಳು ಕೊಲ್ಲಿ ಪ್ರದೇಶದಲ್ಲಿ ಇರಾನೀ ಯುದ್ಧ ದೋಣಿಯಲ್ಲೂ ಕಂಡುಬಂದಿದೆಯಂತೆ. ಅಫ್ಘನ್ ದುಷ್ಮನ್‌ಗಳ ಒಂದು ಗುಂಪು ಅದನ್ನು ಇರಾನೀಯರಿಗೆ ಮಾರಿರಬಹುದೆಂದು ವಾಶಿಂಗ್ಟನ್ ಪೋಸ್ಟ್ ತಿಳಿಸಿದೆ. ಇದರಿಂದ ಪಾಕಿಸ್ತಾನಕ್ಕೆ ಹಾಗೂ ಅದರ ಮೂಲಕ ಅಫ್ಘನ್ ದುಷ್ಮನ್‌ಗಳಿಗೆ ಶಸ್ತ್ರಾಸ್ತ್ರ ಪೂರೈಕೆಗೆ ಅಡ್ಡಿಯುಂಟಾಗಬಹುದು ಎಂಬ ಅಂಜಿಕೆಯಿಂದ ಈಗ ಅಮೇರಿಕಾದ ಅಧಿಕೃತ ವಕ್ತಾರರು ಇರಾನಿಯರೇ ದುಷ್ಮನ್‌ಗಳಿಂದ ಅವನ್ನು ಕಿತ್ತುಕೊಂಡಿದ್ದಾರೆಂದು ಹೇಳಿದ್ದಾರೆ!

### 'ಮುಂದುವರಿದ' ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರು

ಅಮೇರಿಕಾದ ಸರ್ಜನ್ ಜನರಲ್ ಪ್ರಕಾರ ಮಹಿಳೆಯರು ಗಾಯಗೊಳ್ಳುವ ಪ್ರಮುಖ ಘಟನೆ ಕಾರ್ ಅಫಘಾತ ಅಲ್ಲ ಅಥವಾ ಮನೆಯಲ್ಲೋ ದುಡಿಮೆಯ ಜಾಗಗಳಲ್ಲೋ ನಡೆಯುವ ಅಫಘಾತಗಳೂ ಅಲ್ಲ ಮುಖ್ಯವಾಗಿ ಗಂಡಂದಿರ ಅಥವಾ ಬಾಯ್‌ಫ್ರೆಂಡ್‌ಗಳ ಏಟುಗಳು! ಮನೆಯಲ್ಲಿನ ಈ ಹಿಂಸಾಚಾರ ಕಳೆದ ವರ್ಷ 35 ಲಕ್ಷ ಮಹಿಳೆಯರನ್ನು ಈ ದೇಶದಲ್ಲಿ ತಟ್ಟಿದೆಯಂತೆ ಈ ಏಟುಗಳಿಗಿಂತ ಹೆಚ್ಚಾಗಿ ಅದರಿಂದಾಗಿ ಎದುರಿಸಬೇಕಾದ ಭಯ, ಅಂಜಿಕೆ ಹಾಗೂ ಲೈಂಗಿಕ ದುರಾಚಾರ ಮಹಿಳೆಯರನ್ನು ಹೆಚ್ಚಾಗಿ ಬಾಧಿಸುತ್ತವೆ. ಆದರೂ ಹೆಚ್ಚಾಗಿ ಮಹಿಳೆಯರು ಮತ್ತೆ ತಮ್ಮ ಗಂಡಂದಿರ ಬಳಿಗೆ ವಾಪಸಾಗ ಬೇಕಾಗುತ್ತದೆಯಂತೆ! ಕಾರಣ ಆರ್ಥಿಕ ತೊಂದರೆ ಮತ್ತು ಸ್ವತಂತ್ರವಾಗಿ ಬಾಳಲು ಮಕ್ಕಳನ್ನು ಸಾಕಲು ಆ ಸಮಾಜದಲ್ಲಿರುವ ಅಡ್ಡಿ ಆತಂಕಗಳು! ಅತ್ಯಂತ "ಮುಕ್ತ"ಸಮಾಜವಿದು!

### ರಸ್ಟ್ ಘಟನೆ-ಪ.ಜರ್ಮನಿ ಪತ್ರಿಕೆಯ ಸಾಕ್ಷಿ

ಮಾಸ್ಕೋದಲ್ಲಿ ಕೆಂಪು ಚೌಕದಲ್ಲಿ ಅಪಾಯಕಾರಿಯಾಗಿ ಕಾನೂನುಬಾಹಿರವಾಗಿ ಬಂದಿಳಿದ ಪಶ್ಚಿಮ ಜರ್ಮನಿಯ 18 ವರ್ಷದ ಮಾಥ್ಯಾಸ್ ರಸ್ಟ್ ಎಲ್ಲಾ ರೀತಿಯಲ್ಲೂ ತಪ್ಪಿತಸ್ಥ ಎಂದು ಸೋವಿಯತ್ ಸುಪ್ರಿಂ ಕೋರ್ಟ್ ಇತ್ತೀಚೆಗಷ್ಟೆ ತೀರ್ಪು ನೀಡಿ ನಾಲ್ಕು ವರ್ಷಗಳ ಸಜೆ ನೀಡಿತು. ಈ ಬಗ್ಗೆ "ಸ್ವಾತಂತ್ರ್ಯಪ್ರಿಯ" ಬಂಡವಾಳಶಾಹಿ ವಲಯಗಳು ಬಹಳ ಧೂಳೆಬ್ಬಿಸಿದವು. ಆದರೆ ಪಶ್ಚಿಮಜರ್ಮನಿಯದೇ ಆದ ಒಂದು ಪತ್ರಿಕೆ "ಇಲನ್" ಪ್ರಕಾರ ರಸ್ಟ್‌ನ ಈ ಮಾಸ್ಕೋ ಪಯಣದ ಯೋಜನೆಯನ್ನು ಆ ದೇಶದ ಕ್ಯೊಲ್ನ್ ನಗರದ ವಿಮಾನ ನೆಲೆಯಲ್ಲಿರುವ "ವಿಮಾನದಳದ ಮಿತ್ರವೃಂದ"ವೆಂಬ ಸಂಘಟನೆಯ ಕಚೇರಿಯಲ್ಲಿ ತಯಾರಿಸಲಾಗಿತ್ತು. ಆ ಪತ್ರಿಕೆಯ ಸೆಪ್ಟಂಬರ್ ಸಂಚಿಕೆಯಲ್ಲಿ ಮಾಜಿ ನಾಝಿಗಳು ಇರುವ ಈ ಮಿತ್ರವೃಂದ"ದ ಚಟುವಟಿಕೆಗಳ ವಿವರವನ್ನು ನೀಡಲಾಗಿದೆ.

### ರೇಗನ್ ಆಂತರಿಕ ನೀತಿಯ ಒಂದು ದುಷ್ಫಲ

ನ್ಯೂಯಾರ್ಕಿನ ಬಳಿಯಿರುವ ಕೆನಡಿ ವಿಮಾನನಿಲ್ದಾಣದಲ್ಲಿ ಎರಡು ವಿಮಾನಗಳು ಪರಸ್ಪರ ತೀರ ನಿಕಟವಾಗಿ ಹಾದುಹೋಗುವ, ಅದರಿಂದಾಗಿ ಅಫಘಾತಗಳಾಗುವ ಸಂಭವ ಇತ್ತೀಚೆಗೆ ತೀರಾ ಹೆಚ್ಚಾಗಿದೆ. 1981ರಲ್ಲಿ ರೇಗನ್ ಆಡಳಿತ ವಿಮಾನ ಕಂಟ್ರೋಲರ್‌ಗಳ ಮುಷ್ಕರವನ್ನು ಮುರಿದು, 11500 ಕಂಟ್ರೋಲರ್‌ಗಳನ್ನು ಕೆಲಸದಿಂದ ವಜಾ ಮಾಡಿ ಅವರ ಜಾಗಗಳಲ್ಲಿ ಸಾಕಷ್ಟು ಅರ್ಹತೆಯಿಲ್ಲದ ಇತರರನ್ನು ನೇಮಿಸಿದ್ದೇ ಕಾರಣವೆಂದು ಹೇಳಲಾಗುತ್ತಿದೆ.

### ಆಂಧ್ರ ಪ್ರದೇಶ : ಜಂಟೀ ಸಾಮೂಹಿಕ ಚಳವಳಿಗೆ

# ಸಿ. ಪಿ. ಐ. (ಎಂ) ಮತ್ತು ತೆಲುಗುದೇಶಂ ಸಿದ್ಧತೆ

ರಾಜ್ಯವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ರಾಜಕೀಯ ಆಂದೋಲನ ನಡೆಸ ಬೇಕಾದ ಅವಶ್ಯಕತೆಯಿರುವುದರಿಂದಾಗಿ ಕಾಂಗ್ರೆಸ್(ಐ)ನ ಕೇಂದ್ರ ಸರ್ಕಾರದ ವಿರುದ್ಧ ಜಂಟೀ ಕಾರ್ಯಾಚರಣೆ ನಡೆಸುವುದು ತೀರಾ ಅಗತ್ಯವೆಂಬುದಾಗಿ ಸಿ.ಪಿ.ಐ.(ಎಂ) ಮತ್ತು ತೆಲುಗುದೇಶಂ ಪಕ್ಷಗಳು ತಮ್ಮ ಒಮ್ಮತಾಭಿಪ್ರಾಯವನ್ನು ವ್ಯಕ್ತಪಡಿಸಿವೆ. ಜಾತ್ಯಾತೀತ ವಿರೋಧ ಪಕ್ಷಗಳು ಒಂದು ಅಭಿಪ್ರಾಯಕ್ಕೆ ಬರಲು ಇನ್ನೂ ಸಾಧ್ಯವಾಗದಿದ್ದರೂ ಕೂಡ ಸರ್ವಾಧಿಕಾರೀ ಕಾಂಗ್ರೆಸ್(ಐ) ಸರ್ಕಾರವನ್ನು ಕೊನೆಗೊಳಿಸುವ ಸಾಮಾನ್ಯ ಕರ್ತವ್ಯವನ್ನು ಈಡೇರಿಸಲು ಬೇಕಾದ ಐಕ್ಯತೆಯನ್ನು ಸಾಧಿಸಲು ಪ್ರಯತ್ನ ನಡೆಸಬೇಕೆಂದು ಎರಡೂ ಪಕ್ಷಗಳು ಅಭಿಪ್ರಾಯಪಟ್ಟಿವೆ.

ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ಖಂಡಿಸುವ, ರಾಜ್ಯಕ್ಕೆ ಬರ ಪರಿಹಾರ ನಿಧಿಯನ್ನು ಬಿಡುಗಡೆ ಮಾಡದಿರುವ, ರಾಜ್ಯದ ಯೋಜನೆಗಳಿಗೆ ಮತ್ತು ಕೈಗಾರಿಕೆಗಳಿಗೆ ಇನ್ನೂ ಅನುಮತಿ ನೀಡದಿರುವುದರ ವಿರುದ್ಧ ನಡೆಲಿರುವ ಈ ಚಳುವಳಿಯಲ್ಲಿ ಇತರ ಪಕ್ಷಗಳು ಭಾಗವಹಿಸಲು ಇಚ್ಛಿಸಿದಲ್ಲಿ ಅವುಗಳನ್ನು ಸೇರಿಸಿಕೊಳ್ಳಲಾಗುವುದೆಂದು ಎರಡೂ ಪಕ್ಷಗಳೂ ತಿಳಿಸಿವೆ. ಎರಡೂ ಪಕ್ಷಗಳ ಪ್ರತಿನಿಧಿಗಳು ಇಷ್ಟರಲ್ಲೇ ಮತ್ತೊಮ್ಮೆ ಸಭೆ ಸೇರಿ ಸಾಮೂಹಿಕ ಚಳುವಳಿಗೆ ಕಾರ್ಯಕ್ರಮವನ್ನು ರೂಪಿಸಲಿದ್ದಾರೆಂದು ತಿಳಿದುಬಂದಿದೆ.

ಸಿ.ಪಿ.ಐ [ಎಂ]ನ ಆಂಧ್ರಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ.ಎಂ.ಹನುಮಂತರಾವ್ ಅವರ ನೇತೃತ್ವದಲ್ಲಿ ಸೆ. 9 ರಂದು ನಿಯೋಗವೊಂದು ಹೈದರಾಬಾದ್‌ನಲ್ಲಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ ನಂತರ ಮೇಲ್ಕಂಡ ವಿವರಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಗಿದೆ.

ಇತ್ತೀಚೆಗೆ ರಾಷ್ಟ್ರವ್ಯಾಪಿಯಾಗಿ ನಡೆದ ರೈತರ ಮತ್ತು ಕೃಷಿ ಕೂಲಿಕಾರರ ಆಂದೋಲನದ ಪ್ರಮುಖ ಪ್ರಶ್ನೆಗಳನ್ನು ನಿಯೋಗವು ಮುಖ್ಯಮಂತ್ರಿಯ ಗಮನಕ್ಕೆ ತಂದಿತು. ರಾಜ್ಯಸರ್ಕಾರದ ಪರಿಮಿತಿಯಲ್ಲಿ ಸಮಸ್ಯೆಯನ್ನು ಪರಿಹರಿಸುವಂತೆ ನಿಯೋಗ ಒತ್ತಾಯಿಸಿತು. ಭೂನ್ಯಾಯ ಮಂಡಳಿಗಳು ಗುರುತಿಸಿರುವ ಹೆಚ್ಚುವರಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಅದನ್ನು ವಿತರಿಸದಿರುವುದನ್ನು ನಿಯೋಗವು ಎತ್ತಿ ತೋರಿಸಿತು. ಸುಪ್ರೀಂ ಕೋರ್ಟ್‌ನ ತೀರ್ಪಿನ ಅನುಸಾರವಾಗಿ ಭೂಮಿತಿ ಕಾಯಿದೆಗೆ ತಿದ್ದುಪಡಿ ತರುವಂತೆ ನಿಯೋಗ ಒತ್ತಾಯಿಸಿತು. ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಈ ಪ್ರಶ್ನೆಗಳ ಕುರಿತು ಕಾನೂನು ಮತ್ತು ಕಂದಾಯ ಇಲಾಖೆಗಳೊಡನೆ ಸಮಾಲೋಚಿಸಿ ನಂತರ ಪರಿಶೀಲಿಸಲಾಗುವುದೆಂಬ ಭರವಸೆ ನೀಡಿದರು.

ಕೃಷಿ ಕಾರ್ಮಿಕರಹಿತಾಸಕ್ತಿಗಳನ್ನು ರಕ್ಷಿಸಲು ಸಮಗ್ರಕಾಯಿದೆಯೊಂದನ್ನು ತರಬೇಕೆಂದು ನಿಯೋಗವು ಕೇಳಿ ಕೇಂದ್ರ ಸರ್ಕಾರವು ಈ ಬಗ್ಗೆ ಕಾಯಿದೆ ರೂಪಿಸದಿದ್ದಲ್ಲಿ ತಾನೇ ಕಾಯಿದೆ ತರುವುದಾಗಿ ರಾಜ್ಯ ಸರ್ಕಾರ ನೀಡಿದ್ದ ಭರವಸೆಯನ್ನು ನಿಯೋಗ ನೆನಪು ಮಾಡಿಕೊಟ್ಟಿತು. ಈ ಬಗ್ಗೆ ಕೇಂದ್ರವನ್ನು ಮತ್ತೊಮ್ಮೆ ಒತ್ತಾಯಿಸುವುದಾಗಿಯೂ ಅಲ್ಲದೆ ಕೇರಳ ಸರ್ಕಾರ ಹೊರಡಿಸಿರುವ ಕಾಯಿದೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಕ್ರಮ ಕೈಗೊಳ್ಳುವುದಾಗಿಯೂ ಮುಖ್ಯಮಂತ್ರಿ ತಿಳಿಸಿದರು.

ರೈತರ ಕೃಷಿ ಕಾರ್ಮಿಕ ಸಮಸ್ಯೆಗಳನ್ನು ಕುರಿತಂತೆ ನಿಯೋಗವು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿರುವುದಾಗಿ ಪತ್ರಿಕಾ ಹೇಳಿಕೆ ತಿಳಿಸಿದೆ.

### ಕೈಗಾರಿಕಾ ಕಾರ್ಮಿಕರ ಸಮಾವೇಶ

ಕೈಗಾರಿಕೆಗಳ ಮುಚ್ಚುವಿಕೆಯ ವಿರುದ್ಧ, ಬೀಗಮುದ್ರೆ, ಲೇಆಫ್, ಮತ್ತು ರಿಟ್ರೆಂಚ್‌ಮೆಂಟ್‌ಗಳನ್ನು ವಿರೋಧಿಸಿ ಸೆ.28 ರಂದು ರಾಜ್ಯ ಮಟ್ಟದ ಕೈಗಾರಿಕಾ ಕಾರ್ಮಿಕರ ಸಮಾವೇಶ ಹೈದರಾಬಾದಿನಲ್ಲಿ ನಡೆಯಿತು. ಸಿ.ಐ.ಟಿ.ಯು.ನ ರಾಜ್ಯ ಸಮಿತಿಯು ಸಂಘಟಿಸಿದ್ದ ಈ ಸಮಾವೇಶದಲ್ಲಿ 13 ಜಿಲ್ಲೆಗಳಿಂದ 165 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಕಾ.ಎನ್.ಪ್ರಸಾದರಾವ್ 1986ರ ಜೂನ್‌ವರೆಗೆ ದೇಶಾದ್ಯಂತ ಮುಚ್ಚಲ್ಪಟ್ಟಿರುವ 1,30,606 ಕೈಗಾರಿಕೆಗಳ ಪೈಕಿ 8,734 ಕೈಗಾರಿಕೆ

(6ನೇ ಪುಟ ನೋಡಿ)

REG No. BGW-148 MAG(2) PRB DECR 319/ 78-79

## ಉನ್ನತ ಮಟ್ಟಕ್ಕೆ ಏರುತ್ತಿರುವ ಸಮಾಜವಾದಿ ಬೆಳವಣಿಗೆ

(1ನೇ ಪುಟದಿಂದ)

ಮತ್ತು ಸ್ವಾತಂತ್ರ್ಯದ ಹಾದಿ ಹಿಡಿಯುವಂತೆ ಮಾಡಿದೆ. ಸಮಾಜವಾದೀ ಬಣ ಈಗ ಜಗತ್ತಿನ ಮೂರನೇ ಒಂದು ಭಾಗವನ್ನು ಆಕ್ರಮಿಸಿದ್ದು ಉಳಿದವುಗಳು ಬಂಡವಾಳಶಾಹೀ ಸಾಮ್ರಾಜ್ಯಶಾಹೀ ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ನಿರತವಾಗಿವೆ.

ಫ್ಯಾಸಿಸ್ಟ ವಿರೋಧಿ ಯುದ್ಧಾನಂತರದ ಅವಧಿಯಲ್ಲಿ ಸೋವಿಯೆತ್ ಯೂನಿಯನ್‌ನ ಆರ್ಥಿಕರಂಗದಲ್ಲಿ ಸಾಧಿಸಿರುವ ಮಹಾನ್ ವಿಜಯಗಳು ಮತ್ತು ಆ ರಾಷ್ಟ್ರದ ಬಲವರ್ಧನೆ ಒಂದು ಕಡೆ ಇತರ ಪ್ರಮುಖ ಬಂಡವಾಳಶಾಹೀ ದೇಶಗಳಲ್ಲಿನ ಬಿಕ್ಕಟ್ಟು, ನಿರುದ್ಯೋಗ ಮತ್ತು ಅದರ ಹಿನ್ನಡೆಗಳು ಮತ್ತೊಂದು ಕಡೆ ಸಮಾಜವಾದಿ ವ್ಯವಸ್ಥೆಯ ಶ್ರೇಷ್ಠತೆಯನ್ನು ಮತ್ತೊಮ್ಮೆ ಸಾಬೀತು ಗೊಳಿಸಿದೆ. ಸಮಾಜದ ಹಿತಕ್ಕಾಗಿ ಕೈಗಾರಿಕಾ ಮತ್ತು ತಾಂತ್ರಿಕ ಕ್ರಾಂತಿಯ ಸಾಧನೆಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಬಂಡವಾಳಶಾಹೀ ದೇಶಗಳು ಅಸಮರ್ಥವಾಗಿರುವುದು ಆ ದೇಶಗಳಲ್ಲಿ ನಿರುದ್ಯೋಗ ಒಂದೇ ಸಮನೆ ಏರುತ್ತಾ ಹೋಗುತ್ತಿರುವುದರಿಂದ ವ್ಯಕ್ತವಾಗುತ್ತದೆ. ಸಮಾಜವಾದೀ ಸಮಾಜವು ಈ ಎಲ್ಲಾ ಬಿಕ್ಕಟ್ಟುಗಳಿಂದ ಮತ್ತು ನಿರುದ್ಯೋಗ ಸಮಸ್ಯೆಯಿಂದ ಮುಕ್ತವಾಗಿ ತಾಂತ್ರಿಕ ಬೆಳವಣಿಗೆಯ ಫಲವನ್ನು ಜನ ಸಾಮಾನ್ಯರಿಗೆ ಸಿಗುವಂತೆ ಮಾಡಿರುವುದನ್ನು ಜಗತ್ತಿನೆಲ್ಲಾ ಜನತೆ ನೋಡುತ್ತಿದೆ. ಸಾಮ್ರಾಜ್ಯಶಾಹಿಗಳು ಮತ್ತು ಬಂಡವಾಳಶಾಹಿಗಳು ಮಿಲಿಯಗಟ್ಟಲೆ ಡಾಲರುಗಳನ್ನು ವಿನಾಶಕಾರೀ ಶಸ್ತ್ರಾಸ್ತ್ರಗಳಿಗಾಗಿ ವಿನಿಯೋಗಿಸಿ ಆ ಮೂಲಕ ತಮ್ಮ ಅರ್ಥವ್ಯವಸ್ಥೆಯನ್ನು ಹಾಳುಗೆಡುತ್ತಿದ್ದರೆ ಸೋವಿಯೆತ್ ಯೂನಿಯನ್ ಶಸ್ತ್ರಾಸ್ತ್ರಗಳ ಮೇಲೆ ಅಗಾಧ ಪ್ರಮಾಣದಲ್ಲಿ ಖರ್ಚು ಮಾಡುವುದನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸುತ್ತಾ ತನ್ನ ಆರ್ಥಿಕ ಬೆಳವಣಿಗೆಯನ್ನು ತ್ವರಿತ ಗೊಳಿಸುತ್ತಿದೆ.

ಸಿ.ಪಿ.ಎಸ್.ಯು ನ 27ನೇ ಮಹಾಧಿವೇಶನವು ಸಮಾಜವಾದೀ ಬೆಳವಣಿಗೆಗೆ, ಸಮಾಜವಾದೀ ಪ್ರಜಾಪ್ರಭುತ್ವವನ್ನು ಆಳಗೊಳಿಸುವಲ್ಲಿ, ಆಧುನಿಕ ವೈಜ್ಞಾನಿಕ ಸಾಧನೆಗಳನ್ನು ಪೂರ್ಣವಾಗಿ ಬಳಸಿಕೊಳ್ಳುವಲ್ಲಿ, ಸೋವಿಯೆತ್ ಜನತೆಯ, ಕಾರ್ಮಿಕ ವರ್ಗದ ಆರ್ಥಿಕ, ಭೌತಿಕ ಮತ್ತು ಸಾಂಸ್ಕೃತಿಕ ಮಟ್ಟವನ್ನು ಎತ್ತರಿಸುವದು ದಿಕ್ಕಿನಲ್ಲಿ ಒಂದು ಹೊಸ ದೃಷ್ಟಿ ಕೋನವನ್ನು ರೂಪಿಸಿದೆ. 27ನೇ ಮಹಾಧಿವೇಶನ 15 ವರ್ಷದ ಯೋಜನೆಯನ್ನು ಅಳವಡಿಸಿಕೊಂಡಿದ್ದು ಅದು ರಾಷ್ಟ್ರೀಯ ಆದಾಯವನ್ನು ಮತ್ತು ಕೈಗಾರಿಕಾ ಉತ್ಪನ್ನವನ್ನು ಎರಡು ಪಟ್ಟು ಹೆಚ್ಚಿಸಲು ದೃಢ ನಿಶ್ಚಯ ಕೈಗೊಂಡಿದೆ. ಈ ಯೋಜನೆಯ ಪರಿಣಾಮವಾಗಿ ಸೋವಿಯೆತ್ ದೇಶ ಇಲ್ಲಿಯವರೆಗೆ ಮಾಡಿರುವ ಸಾಧನೆಗೆ ಸಮನಾದ ಸಾಧನೆಯನ್ನು 15 ವರ್ಷಗಳ ಅವಧಿಯೊಳಗೇ ಸಾಧಿಸಲು ತೀರ್ಮಾನಿಸಿದೆ.

ಸೋವಿಯೆತ್ ಯೂನಿಯನ್‌ನ ಮತ್ತು ಸಮಾಜವಾದೀ ಶಿಬಿರದ ಸಾಧನೆಗಳು ಹೊಸದಾಗಿ ವಿಮೋಚಿತಗೊಂಡ ದೇಶಗಳ ಸಾಮರ್ಥ್ಯವನ್ನು ಹೆಚ್ಚಿಸಿ ಸಾಮ್ರಾಜ್ಯಶಾಹೀ ಒತ್ತಡಗಳನ್ನು ಸಮರ್ಥವಾಗಿ ಎದುರಿಸಲು ಸಹಾಯ ಮಾಡಿದೆ. ಜಗತ್ತಿನ ಆರ್ಥಿಕತೆಯಲ್ಲಿ ಸಮಾಜವಾದದ ಶಕ್ತಿ ಹೆಚ್ಚುತ್ತಿರುವುದರ ಪ್ರಯೋಜನವನ್ನು ಭಾರತವೂ ಪಡೆದು ಕೊಂಡಿದೆ. ಭಾರತದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಸೋವಿಯೆತ್ ದೇಶ ಮತ್ತು ಇತರ ಸಮಾಜವಾದೀ ದೇಶಗಳ ಸಹಾಯದಿಂದಲೇ ಕಟ್ಟಲಾಗಿವೆ. ಈ ಸಹಾಯ ದೊರೆಯದಿದ್ದಲ್ಲಿ ಭಾರತವು ತನ್ನ ಆರ್ಥಿಕತೆಯನ್ನು ಉತ್ತಮಪಡಿಸಿಕೊಳ್ಳಲು ಮತ್ತು ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಭಾರತ–ಸೋವಿಯೆತ್ ಮೈತ್ರಿ ಒಪ್ಪಂದ ಮತ್ತು ಸಹಕಾರ ಎರಡೂ ದೇಶಗಳ ಸ್ನೇಹಕ್ಕೆ ಬಲವಾದ ಬೆಸುಗೆ ಹಾಕಿದೆ. ಈ ಮೈತ್ರಿ ಭಾರತದ ಭದ್ರತೆಯನ್ನು ಕಾಪಾಡಲು ಮತ್ತು ನೆರೆಯ ಪಾಕಿಸ್ತಾನಕ್ಕೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿ ನಮ್ಮ ದೇಶಕ್ಕೆ ಅಪಾಯ ಒಡ್ಡುತ್ತಿರುವ ಅಮೇರಿಕದ ಒಳಸಂಚನ್ನು ಎದುರಿಸಿ ದೇಶದಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಬರುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಭಾರತ–ಸೋವಿಯೆತ್ ಒಪ್ಪಂದವು ಇತರ ದೇಶಗಳಸ್ವಾತಂತ್ರ್ಯ ಮತ್ತು ಶಾಂತಿಯನ್ನು ರಕ್ಷಿಸುವ ಸೋವಿಯೆತ್ ದೇಶದ ಇಂಗಿತವನ್ನು ಎತ್ತಿ ತೋರಿಸುತ್ತದೆ. 1986ರ ದೆಹಲಿ ಘೋಷಣೆ, ಶಾಂತಿಯ ಕುರಿತಾದ ಘೋಷಣೆಗಳು ಯುದ್ಧ ಮತ್ತು ಶಾಂತಿಯಂತಹ ಪ್ರಮುಖ ಪ್ರಶ್ನೆಗೆ, ವಿಶ್ವ ಶಾಂತಿ ಚಳವಳಿಗೆ ಮತ್ತು ಅಲಿಪ್ತ ದೇಶಗಳು ಮಿಲಿಟರಿ ಮತ್ತಿತರ ಮೈತ್ರಿಗಳಿಂದ ದೂರವಿರಲು ನಡೆಸುವ ಹೋರಾಟಗಳಿಗೆ ಸಂಬಂಧಿಸಿದಂತೆ ಎರಡೂ ದೇಶಗಳ ಸಮಾನ ದೃಷ್ಟಿಕೋನವನ್ನು ವ್ಯಕ್ತ ಪಡಿಸುತ್ತದೆ.

ಯುದ್ಧಾನಂತರದ ದಶಕಗಳಲ್ಲಿ ಜಾಗತಿಕ ವ್ಯವಹಾರಗಳಲ್ಲಿನ ಸೋವಿಯೆತ್ ಮಧ್ಯಪ್ರವೇಶವು ಇತರ ದೇಶಗಳ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೇ ಆಗಿದೆ. ವಿಶ್ವ ಸಂಸ್ಥೆಯಲ್ಲೇ ಆಗಲಿ ಹೊರಗೇ ಆಗಲಿ, ಅರಬ್ ರಾಷ್ಟ್ರಗಳಲ್ಲೇ ಆಗಲಿ ಅಥವಾ ನಿಕರಾಗುವ, ಮೊಜಾಂಬಿಕ್ ಅಂಗೋಲಾಗಳಾಗಲಿ ಸೋವಿಯೆತ್ ಯೂನಿಯನ್ ಸ್ವಾತಂತ್ರ್ಯದ ಪರವಾಗಿ ಮತ್ತು ಅಮೆರಿಕನ್ ಆಕ್ರಮಣಕ್ಕೆದುರಾಗಿ ತನ್ನ ಧ್ವನಿಯನ್ನು ಎತ್ತುತ್ತಾ ಬಂದಿದೆ.

ಸೋವಿಯೆತ್ ಯೂನಿಯನ್ ಶಾಂತಿಯುತ ಸಹಬಾಳ್ವೆಯ ಧೋರಣೆಯನ್ನು ದೃಢವಾಗಿ ಅನುಸರಿಸುತ್ತಾ ಬಂದಿದೆ. ಜಾಗತಿಕ ಶಾಂತಿ ಚಳವಳಿಯ ನೇತಾರನಾಗಿ ಅಣುಅಸ್ತ್ರ ಪೈಪೋಟಿಯನ್ನು ನಿಲ್ಲಿಸಲು ಮತ್ತು ಅಂತಿಮವಾಗಿ ಎಲ್ಲಾ ಅಣುಅಸ್ತ್ರಗಳನ್ನು ನಾಶಪಡಿಸಲು ಸೋವಿಯೆತ್ ಯೂನಿಯನ್ ಹಲವಾರು ಸಲಹೆಗಳನ್ನು ಮುಂದಿಟ್ಟಿದೆ.

ಸೋವಿಯೆತ್ ಯೂನಿಯನ್ ಅಣು ಪರೀಕ್ಷೆಯನ್ನು ಏಕ ಪಕ್ಷೀಯವಾಗಿ ನಿಲ್ಲಿಸುವ ಘೋಷಣೆಮಾಡಿಅಮೆರಿಕವೂ ಇದನ್ನೇ ಅನುಸರಿಸಬಹುದೆಂದು ನಿರೀಕ್ಷಿಸಿತು. ಅಲ್ಲದೆ ಶಸ್ತ್ರಾಸ್ತ್ರ ಪೈಪೋಟಿಯ ಅಂತ್ಯಕ್ಕೆ ಸಹಾಯಕವಾಗುವುದೆಂದು ಭಾವಿಸಿತು. ಆದರೆ ಅಮೇರಿಕವು ಸೋವಿಯೆತ್ ದೇಶದ ಮೇಲಿನ ಅಣು ಆಕ್ರಮಣದ ವಿನಾಶಕಾರೀ ಯೋಜನೆಯಾದ ತಾರಾಯುದ್ಧದ ಯೋಜನೆಯನ್ನು ಪ್ರಕಟಿಸಿತು.

ಮಧ್ಯಮ ಮತ್ತು ಸಮೀಪಗಾಮಿ ಕ್ಷಿಪಣಿಗಳನ್ನು ಯೂರೋಪಿನಿಂದ ತೆಗೆದು ಹಾಕುವ ಇತ್ತೀಚಿನ ಅಮೆರಿಕ ಸೋವಿಯೆತ್ ಒಪ್ಪಂದವು ಕೊಂಚ ಉತ್ಸಾಹ ಹುಟ್ಟಿಸಿದರೂ ಕೂಡ ಸೋವಿಯೆತ್ ಯೂನಿಯನ್ ಮೇಲೆ ಮತ್ತು ಜಗತ್ತಿನ ಮೇಲೆ ಶ್ರೇಷ್ಠತೆಯನ್ನು ಸಾಧಿಸುವ ಇಚ್ಛೆ ಹೊಂದಿರುವ ಅಮೆರಿಕವನ್ನು ಈ ವಿಷಯದಲ್ಲಿ ನಂಬುವುದು ಕಷ್ಟ.

ನ್ಯೂಕ್ಲಿಯರ್ ಯುದ್ಧವನ್ನು ತಪ್ಪಿಸಲು ಸೋವಿಯೆತ್‌ಯೂನಿಯನ್ ನಡೆಸುತ್ತಿರುವ ಸತತ ಹೋರಾಟವನ್ನು ಎಲ್ಲಾ ದೇಶಗಳ ಕಾರ್ಮಿಕ ವರ್ಗ ಮತ್ತು ಜನತೆಅಪಾರವಾಗಿಪ್ರಶಂಸಿಸಿದೆ. ಬೇರೆ ಬೇರೆ ದೇಶಗಳ ವಿದೇಶಾಂಗ ಧೋರಣೆಯನ್ನು ರೂಪಿಸುವಲ್ಲಿ ದಿನೇ ದಿನೇ ಶಕ್ತಿಶಾಲೀ ಅಂಶವಾಗುತ್ತಿರುವ ವಿಶ್ವಶಾಂತಿ ಚಳವಳಿಯನ್ನು ಬಲಿಷ್ಠಗೊಳಿಸುತ್ತಿದೆ. ಯುದ್ಧ ವಿರೋಧಿ ಹೋರಾಟ ಶ್ರಮಜೀವಿ ವರ್ಗದ ಅಂತರಾಷ್ಟ್ರೀಯತೆಗೆ ಒಂದು ಹೊಸ ಸ್ಫೂರ್ತಿ ನೀಡಿದೆ. ಈ ಹೋರಾಟ ಮಾನವ ಕುಲದ ಉಳಿವಿಗಾಗಿನ, ಎಲ್ಲಾ ಜನರ ಬದುಕಿನ ಹಕ್ಕಿಗಾಗಿನ ಹೋರಾಟವಾಗಿದೆ.

ಸಮಾಜವಾದೀ ಮುನ್ನಡೆಯಲ್ಲಿ ಇನ್ನೂ ಹೆಚ್ಚಿನ ಯಶಸ್ಸಿಗಾಗಿ ಮತ್ತು ಶಾಂತಿಗಾಗಿ ನಡೆಸುತ್ತಿರುವ ಹೋರಾಟದ ವಿಜಯಕ್ಕಾಗಿ ಸಿ.ಪಿ.ಐ.(ಎಂ)ನ ಕೇಂದ್ರಸಮಿತಿಯು ಸಿ.ಪಿ.ಎಸ್.ಯು.ಗೆ ಮತ್ತು ಸೋವಿಯೆತ್ ಜನತೆಗೆ ಶುಭವನ್ನು ಹಾರೈಸಿದೆ.

ಸಿ.ಪಿ.ಎಸ್.ಯು.ನ 15 ವರ್ಷಗಳ ಯೋಜನೆ ಸೋವಿಯೆತ್‌ಜನತೆಯನ್ನು ಆರ್ಥಿಕ ಮುನ್ನಡೆಯಲ್ಲಿ ಮತ್ತಷ್ಟು ಉನ್ನತ ಎತ್ತರಕ್ಕೆ ಕೊಂಡೊಯ್ಯಲಿ. ಜಾಗತಿಕ ಶಾಂತಿಗಾಗಿನ ಹೋರಾಟವನ್ನು ಇನ್ನಷ್ಟು ಬಲಗೊಳಿಸಲಿ. ●

## ಶ್ರೀಲಂಕಾ : ಒಪ್ಪಂದವನ್ನು ಪೂರ್ಣವಾಗಿ ಪಾಲಿಸಿ

[1ನೇ ಪುಟದಿಂದ]

ಮುಂದುವರಿಯಬೇಕೆಂದು ಪಾಲಿಟ್ ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಆರ್.ಎಸ್.ಎಸ್. ಮುಖಂಡ ದೇವರಸ್‌ರವರ ವಿಜಯದಶಮಿಭಾಷಣ ಹಿಂದೂಕೋಮುವಾದ, ಆಳುವಪಕ್ಷದ ರಾಜಕೀಯ ಹಾಗೂ ಚುನಾವಣಾ ಸಮಯ ಸಾಧಕತೆಯ ಲಾಭ ಪಡೆದು ಆಳುವ ಪಕ್ಷದೊಂದಿಗೆ ಸಂಬಂಧ ಜೋಡಿಸುವ ಹಂಚಿಕೆಯಲ್ಲಿದೆ ಎಂಬುದನ್ನು ಸ್ಪಷ್ಟ ಪಡಿಸಿದೆ. ಆದ್ದರಿಂದ ಯಾವುದೇ ಬಣದ ಕೋಮುವಾದಿಗಳು ಆಳುವ ಪಕ್ಷದ ಮೇಲೆ ಒತ್ತಡ ಹೇರಲು ನಡೆಸುವ ಪ್ರಯತ್ನಗಳ ಬಗ್ಗೆ ವಿರೋಧ ಪಕ್ಷಗಳ ಜಾತ್ಯಾತೀತ ಶಕ್ತಿಗಳು ಜಾಗರೂಕರಾಗಿರಬೇಕು.

ಇವಲ್ಲದೆ ಪಾಲಿಟ್‌ಬ್ಯೂರೋ ಹೇಳಿಕೆ ಕಾಂಗ್ರೆಸ್‌ನ ಶ್ರೀಮಂತರ ಪರವಾದ ಧೋರಣೆಗಳಿಂದಾಗಿ ದೇಶ ತೀವ್ರಗತಿಯಿಂದ ವಿದೇಶೀ ಸಾಲದ ಬಲೆಯಲ್ಲಿ ಸಿಲುಕಿಕೊಳ್ಳುತ್ತಿರುವ ಅಪಾಯದ ವಿರುದ್ಧ ಜನತೆಯನ್ನು ಜಾಗೃತಗೊಳಿಸಬೇಕೆಂದು ಪಕ್ಷದ ಸದಸ್ಯರೂ ಹಾಗೂ ಇತರ ಎಡ ಶಕ್ತಿಗಳಿಗೆ ಕರೆ ನೀಡಿದೆ.

ಪಂಜಾಬಿನಲ್ಲಿ ಆಳುವ ಪಕ್ಷ ತನ್ನ ಸಂಕುಚಿತ ದೃಷ್ಟಿಯನ್ನು ಬಿಟ್ಟುಕೊಟ್ಟು ಬರ್ನಾಲಾರವರ ಚುನಾಯಿತ ಸರ್ಕಾರವನ್ನು ಮರುಸ್ಥಾಪಿಸಿ, ಇತರಪರಿಣಾಮಕಾರೀ ರಾಜಕೀಯ ಹಾಗೂ ಆಡಳಿತಾತ್ಮಕ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದ.

ಎಡ ಪಕ್ಷಗಳ ನೇತೃತ್ವದ ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಕೇರಳ ರಾಜ್ಯಗಳಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಪರಿಶೀಲಿಸಿದಪಾಲಿಟ್‌ಬ್ಯೂರೋ ಈ ರಾಜ್ಯಗಳ ಚುನಾಯಿತ ಸರ್ಕಾರಗಳ ಬಗ್ಗೆ ಕಾಂಗ್ರೆಸ್(ಐ) ಹಾಗೂ ಕೇಂದ್ರ ಸರ್ಕಾರದ ಅನೀತಿ ಪೂರ್ಣ ವರ್ತನೆಗಳನ್ನು ಗಮನಿಸಿತು. ಪಶ್ಚಿಮ ಬಂಗಾಳದಲ್ಲಿ "ರಾಡನ್‌ಚೌಕ"ದ ಬಗ್ಗೆ, ಕೇರಳದಲ್ಲಿ ಸಾರಾಯಿ ಅಂಗಡಿಗಳ ಪ್ರಶ್ನೆಯ ಮೇಲೆ ಗುತ್ತೇದಾರಿ ಪತ್ರಿಕೆಗಳ ಬೆಂಬಲದೊಂದಿಗೆ ಕೆಲವು ದಿನ ಚಳುವಳಿ ನಡೆಸಿ, ನಂತರ ಅವರು ಹಿಂದೆ ಸರಿಯಬೇಕಾಗಿ ಬಂದಿದೆ.

ತ್ರಿಪುರಾದಲ್ಲಿ ಚುನಾವಣೆ ಸಮೀಪಿಸುತ್ತಿದ್ದಂತೆ ಏಕ ಪಕ್ಷೀಯವಾಗಿ "ಸಾಲಮೇಳ" ನಡೆಸಲಾಗುತ್ತಿದೆ. ಟಿ.ಯು.ಜೆ.ಎಸ್.ನೊಂದಿಗೆ ಕಾಂಗ್ರೆಸ್‌ನ ಮಿತ್ರತ್ವ ಮುಂದುವರೆಯುತ್ತಿದೆ. ಆದರೆ ಎಡರಂಗ ಸರ್ಕಾರ ಬುಡಕಟ್ಟು ಜನಗಳು ಹಾಗೂ ಇತರರ ಐಕ್ಯತೆಯನ್ನು ಕಾಪಾಡಿಕೊಂಡು ಜನತೆಯ ಸೇವೆ ಮಾಡಿಕೊಂಡು ಬರತ್ತಿರುವ ಹಿನ್ನಲೆಯಲ್ಲಿ ತ್ರಿಪುರಾದ ಮತದಾರರು ಮತ್ತೊಮ್ಮೆ ಎಡರಂಗದ ಮೇಲಿನ ತಮ್ಮ ಭರವಸೆಯನ್ನು ಪುನರುಚ್ಚರಿಸುತ್ತಾರೆ ಎಂದು ಪಾಲಿಟ್‌ಬ್ಯೂರೋ ಆಶಿಸಿದೆ. ○

## ಈ ವಾರ....

★ ಪಿ.ಎಲ್–480 ಹಣದಿಂದ ಅಮೇರಿಕಾ ಭಾರತದ ಸ್ಥಿರತೆಗೆ ಧಕ್ಕೆ ತರದಿದ್ದೀತೆ? ಅದು ಧಾರಾಳವಾಗಿ ಈ ಹಣವನ್ನು ಖರ್ಚು ಮಾಡ ತೊಡಗಿದರೆ, ದೇಶದ ಹಣದ ಚಲಾವಣೆ ಅತಿಯಾಗಿ, ಬೆಲೆಗಳು ಏರಿ ಅರ್ಥ ವ್ಯವಸ್ಥೆ ಅಸ್ತವ್ಯಸ್ತಗೊಳ್ಳುವುದುಒಂದು ಅಪಾಯ ಈ ಹಣವನ್ನು ನಮ್ಮ ರಾಜಕೀಯ ವ್ಯವಸ್ಥೆಯನ್ನೇ ಬುಡ ಮೇಲು ಮಾಡುವುದಕ್ಕೂ ಬಳಸಬಹುದು. ಸಿ.ಐ.ಎ. ಮುಂತಾದವುಗಳ ಚಟುವಟಿಕೆಗಳ ರೀತಿನೀತಿಗಳನ್ನು ಬಲ್ಲವರು ಈ ಭೀತಿ ಆಧಾರ ರಹಿತವೆನ್ನಲಾರರು.
ಈಗ ಅದು ಪುನಃ ಅವತರಿಸಿದೆ.

—ಎಚ್ಚೆಸ್ಕೆ
ಪ್ರಜಾವಾಣಿ ಬಳಗದ ಖ್ಯಾತ ಅಂಕಣಕಾರ

★ ರಾಜೀವ್‌ಗಾಂಧಿಯವರು ತಮ್ಮ ಸಂಪುಟ ಬದಲಾವಣೆ ಮಾಡಬೇಕಾಗಿದ್ದವರು ತಿಥಿಗಳ ತಿಂಗಳು ಬಂತೆಂದುನಿಲ್ಲಿಸಿರುವುದು ವರದಿಯಾಗಿದೆ. ರಾಜೀವ್‌ಗಾಂಧಿಯವರ 21 ನೇ ಶತಮಾನಕ್ಕೆ ಹಾರುವ ಕ್ರಮ ....ಅಬ್ಬಾ!

—ಶಂಕರನ್, ಇಂಡಿಯನ್ ಎಕ್ಸ್‌ಪ್ರೆಸ್
'ವಾಚಕರವಾಣಿ'ಯಲ್ಲಿ

★ ಜಿಮ್ಮಿ ಕಾರ್ಟರ್‌ಗೆ ಸುಳ್ಳು ಹೇಳುವುದು ಸಾಧ್ಯವಿರಲಿಲ್ಲ. ಆದರೆ ರೇಗನ್‌ಗೆ ಉಪಯೋಗಕ್ಕೆ ಬರುವ ಯಾವ ರೀತಿಯ ಸುಳ್ಳನ್ನಾದರೂ ಹೇಳಲು ಬರುತ್ತದೆ.

–ಫಿಡಲ್‌ಕ್ಯಾಸ್ಟ್ರೋ

★ ಬೆಳಗಾವಿ ಜಿಲ್ಲೆಯ ಬೆಂಡಿಗೇರಿ ಗ್ರಾಮದಲ್ಲಿ ಇತ್ತೀಚೆಗೆ ಊರ ಗೌಡರ ಹೊಲದ ನಾಲ್ಕು ಜೋಳದ ದಂಟು ಕೊಯ್ದ ಅಪರಾಧಕ್ಕಾಗಿ, ಹಳ್ಳಿಯ ನಾಲ್ವರು ಹರಿಜನರಿಗೆ ಊರ ಪ್ರಮುಖರು ಮಲ ತಿನ್ನಿಸಿದ, ಕರುಳು ಕಿವುಚುವ ಬರ್ಬರ ಕೃತ್ಯ ನಡೆದಿದೆ.

–'ಸುದ್ದಿ ಸಂಗಾತಿ' ಸಂಪಾದಕೀಯ.

★ ವಿದೇಶೀ ಕೈಗಳಿಗೆ ಅವುಗಳದ್ದೇ ವಿಧಾನಗಳಿವೆ.

— ವಿ.ಪಿ.ಸಿಂಗ್

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Editorial and Managerial Office : L-56, K. V. Temple Street,
Sultanpet B-53 Phone : 75331
Editor Ramachandra Rao
Managing Editor : N. K. Upadhyaya